ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್ 2011

ಬೆಲೆ ರೂ. 1.



ಅಭಿನಂದನೆ

# ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರಿಗೆ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ



ಕನ್ನಡ ಸೇವೆಯನ್ನು ಸೂಕ್ಷ್ಮಗೊಳಿಸುವ ಅಪೂರ್ವ ಪತ್ರಕರ್ತ ಪ್ರಜಾವಾಣಿಯ ಸಹಾಯಕ ಸಂಪಾದಕ ದಿನೇಶ್ ಅಮೀನ್ ಮಟ್ಟು ಅವರು 2011ನೇ ಸಾಲಿನ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಪಡೆದಿದ್ದಾರೆ.

ಪತ್ರಕರ್ತರ ನಡವಳಿಕೆಗಳು ಸಂಶಯಾಸ್ಪದವಾಗುತ್ತಿರುವ ಈ ಕಾಲದಲ್ಲಿ ಆ ವೃತ್ತಿಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗುತ್ತಿರುವ ಬೆರಳೆಣಿಕೆಯ ಕೆಲವೇ ಕೆಲವು ಪತ್ರಕರ್ತರಲ್ಲಿ ದಿನೇಶ್ ಅಮೀನ್ ಮಟ್ಟು ಅವರು ಒಬ್ಬರು. ತಮ್ಮ ಬರೆಹಗಳ ಮೊದಲ ಹಂತದಲ್ಲಿ ಜನರ ಸಂವೇದನೆಗಳಿಗೆ ಸೂಕ್ಷ್ಮವಾಗಿ ಧ್ವನಿಯಾಗುವ ಅವರು, ಎರಡನೇ ಹಂತದಲ್ಲಿ ನಿಧಾನವಾಗಿ ಸಾರ್ವಜನಿಕರ ಅಭಿಪ್ರಾಯಗಳನ್ನು ರೂಪಿಸುವ ಶಕ್ತಿಯಾಗಿ ಉದೀಯಮಾನರಾಗುತ್ತಾರೆ. ವಿಸ್ತಾರವಾದ ಓದು, ಜನಗಳ ನಡುವಣ ನಿರಂತರ ಒಡನಾಟ, ಕನ್ನಡ ಭಾಷೆಯ ಮೇಲಿನ ಅಪೂರ್ವ ಹಿಡಿತಗಳ ಜೊತೆಗೆ ಅತ್ಯಂತ ಜನಪರವಾದ ಚಿಂತನಾಕ್ರಮಗಳ ಮೂಲಕ ದಿನೇಶ್ ಅವರು ಕರ್ನಾಟಕದ ಜನರ ಸಂವೇದನೆಗಳನ್ನು ಮತ್ತೆ ಮತ್ತೆ ಸೂಕ್ಷ್ಮಗೊಳಿಸುತ್ತಾ ಬಂದಿದ್ದಾರೆ. 'ಸಹೃದಯ ಸಾಮಾನ್ಯ ಜನತೆಯ ಕಣ್ಣುಗಳ ಮೂಲಕ' ಅವರು ನಾಡನ್ನು ನೋಡುವ ಮತ್ತು ವಿವರಿಸುವ ರೀತಿ ಅಸಾಮಾನ್ಯವಾದುದು.

ದಿನೇಶ್ ಅವರ ಚಿಂತನಾ ಕ್ರಮ ಮತ್ತು ಬರೆಹಗಳಿಗೆ ಉತ್ತಮ ಆರಂಭ ಸಿಕ್ಕಿದ್ದು ಮಂಗಳೂರಿನಲ್ಲಿ ದಿವಂಗತ ವಡ್ಡರ್ಸೆ ರಘುರಾಮ ಶೆಟ್ಟರು ಆರಂಭಿಸಿದ್ದ ಮುಂಗಾರು ಪತ್ರಿಕೆಯಲ್ಲಿ. 'ಜನ ಶಕ್ತಿ ಬೆಳೆತೆಗೆವ' ಕನಸಿನೊಂದಿಗೆ ಆರಂಭವಾದ ಆ ಪತ್ರಿಕೆಯಲ್ಲಿ ಪಳಗಿದ ಅವರು 1989 ರಲ್ಲಿ ಪ್ರಜಾವಾಣಿ ಪತ್ರಿಕೆ ಸೇರಿದರು. ಮುಂದೆ ಆ ಪತ್ರಿಕೆಯ ಪ್ರಮುಖ ವರದಿಗಾರರಾಗಿ ಬೆಂಗಳೂರು, ಧಾರವಾಡ, ತುಮಕೂರು, ದೆಹಲಿಗಳಲ್ಲಿ ಕೆಲಸ ಮಾಡಿ, ಪ್ರಸ್ತುತ ಪ್ರಜಾವಾಣಿಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ಸಹಾಯಕ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿನೇಶ್ ಅವರು ಭಾಷಾಂಧರೂ ಅಲ್ಲ, ದೇಶಾಂಧರೂ ಅಲ್ಲ, ಬದಲು ಭಾರತದ ಒಕ್ಕೂಟ ವ್ಯವಸ್ಥೆಯ ಆಂತರಿಕ ತರ್ಕ ಮತ್ತು ಸಂಬಂಧಗಳನ್ನು ಪತ್ರಕರ್ತನೊಬ್ಬನ ದಿಟ್ಟತನದಲ್ಲಿ ಗ್ರಹಿಸಿ, ವಿಶ್ಲೇಷಿಸಿ ಮಂಡಿಸುವ ಅಸಾಧಾರಣ ಚೈತನ್ಯದ ಲೇಖಕ. ಕನ್ನಡ ಭಾಷೆ ದಿನೇಶ್ ಅವರಲ್ಲಿ ಹೊಸ ಕಸುವು ಕಂಡುಕೊಂಡಿತು. ಅವರು ಬರೆದ 'ಕಣ್ಣೆದುರಿನ ತಳಮಳ (1999), ದೆಹಲಿ ನೋಟ (2008) ಮತ್ತು ನಾರಾಯಣ ಗುರು (2009) ಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ.

ಅವರ ಲೇಖನಗಳ ಸೃಜನಶೀಲತೆಯ ಗುಟ್ಟನ್ನು ಅರಿಯಬೇಕಾದರೆ ನಾವು ಅವರ 'ದೆಹಲಿ ನೋಟ'( 2008) ಕೃತಿಯನ್ನು ಓದಬೇಕು. ದೆಹಲಿ ರಾಷ್ಟ್ರದ ರಾಜಧಾನಿ. ಅಲ್ಲಿಂದ ಕರ್ನಾಟಕದ ಬಗ್ಗೆ ಬರೆಯುವಾಗ ಆ ಬರೆಹಕ್ಕೆ ರಾಷ್ಟ್ರೀಯ ಚೌಕಟ್ಟು ಇರಲೇಬೇಕು. ದೆಹಲಿ ನೋಟದ ಯಾವ ಲೇಖನವೂ ಈ ಚೌಕಟ್ಟನ್ನು ಮೀರಲೇ ಇಲ್ಲವಾದ್ದರಿಂದ ಅವುಗಳಿಗೆ ವಿಶೇಷವಾದ ಶಕ್ತಿ ಪ್ರಾಪ್ತಿಸಿದೆ. ರಾಜ್ಯದ ಸಮಸ್ಯೆಗಳು ಕೇಂದ್ರದಲ್ಲಿ ಹೇಗೆ ಪ್ರತಿನಿಧೀಕರಿಸಲ್ಪಡುತ್ತವೆ ಎಂದು ಕರ್ನಾಟಕದ ಜನರಿಗೆ ಮೊದಲ ಬಾರಿಗೆ ಸವಿಸ್ತಾರವಾಗಿ ತಿಳಿದದ್ದು ದಿನೇಶ್ ಅಂಕಣಗಳನ್ನು ಓದಲಾರಂಭಿಸಿದ ಮೇಲೆಯೇ. ಕೇಂದ್ರದಲ್ಲಿ ರಾಜ್ಯದ ದುರ್ಬಲ ಪ್ರತಿನಿಧೀಕರಣವನ್ನು ಅವರು ಪ್ರಖರ ಭಾಷೆಯಲ್ಲಿ ಅಷ್ಟೇ ಸೃಜನಶೀಲವಾಗಿ ಪ್ರತೀತಗೊಳಿಸಿದರು. ಎಷ್ಟೋ ಹೋರಾಟಗಾರರು ಮತ್ತು ಜನಪ್ರತಿನಿಧಿಗಳು ದಿನೇಶ್ ಲೇಖನದಿಂದ ಪ್ರೇರಣೆ ಪಡೆದು ತಮ್ಮ ಹೋರಾಟದ ಹಾದಿಗಳನ್ನು ಹರಿತಗೊಳಿಸಿಕೊಂಡಿದ್ದಾರೆ. ಅವರ ಈಚಿನ ಅಂಕಣ 'ಅನಾವರಣ'ವು ಪ್ರಜಾಸತ್ತಾತ್ಮಕ ವ್ಯವಸ್ಥೆಯ ದೌರ್ಬಲ್ಯ ಮತ್ತು ಶಾಖತುಗಳನ್ನು ನಿಷ್ಪಕ್ಷಪಾತವಾಗಿ ಜನರ ಮುಂದಿರಿಸುತ್ತಿದೆ.

*ದೆಹಲಿಯ ವರದಿಗಾರರಾಗಿ 2000–2009ರವರೆಗೆ ಸೇವೆ ಸಲ್ಲಿಸಿದ ದಿನೇಶ್ ಅವರು ತಮ್ಮ ನೇರ ಮತ್ತು ಸ್ಪಷ್ಟ ನುಡಿಗಳಿಂದ ದೆಹಲಿ ಕನ್ನಡಿಗರಿಗೆ ಚಿರಪರಿಚಿತರು. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ದಿನೇಶ್ ಅಮೀನ್ ಮಟ್ಟು ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.*

## ಕನ್ನಡ ಪ್ರಭ ದಿನಪತ್ರಿಕೆಯ ದೆಹಲಿ ವಿಶೇಷ ವರದಿಗಾರರಾಗಿ ರೇಣುಕಾ ಪ್ರಸಾದ್ ಹಾಡ್ಯ



ಕನ್ನಡಪ್ರಭ ಪತ್ರಿಕೆಯ ದೆಹಲಿ ವಿಶೇಷ ವರದಿಗಾರರಾಗಿ ಶ್ರೀ ರೇಣುಕಾ ಪ್ರಸಾದ್ ಹಾಡ್ಯ ಅವರು ದೆಹಲಿಗೆ ಆಗಮಿಸಿದ್ದಾರೆ. ಹವ್ಯಾಸಿ ಬರಹಗಾರನಾಗಿ ಪತ್ರಿಕೋದ್ಯಮ ಆರಂಭಿಸಿದ ರೇಣುಕಾ ಪ್ರಸಾದ್ ಅವರು ಮೈಸೂರಿನ ಮಹಾನಂದಿ, ಆಂದೋಲನ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 1996ರಲ್ಲಿ ಬೆಂಗಳೂರಿನ ಕನ್ನಡಪ್ರಭಕ್ಕೆ ಸೇರ್ಪಡೆಯಾದ ಇವರು 1998ರಿಂದ ಒಂದು ದಶಕ ಶಿವಮೊಗ್ಗದಲ್ಲಿ ಕೆಲಸ ನಿರ್ವಹಿಸಿದ ನಂತರ ಬೆಂಗಳೂರಿನ ಕೇಂದ್ರ ಕಛೇರಿಯ ಮುಖ್ಯ ವರದಿಗಾರರಾಗಿ ಹುದ್ದೆ ನಿರ್ವಹಿಸಿದ್ದಾರೆ. ಆರ್ಥಿಕ ಕ್ಷೇತ್ರದ ಬಗ್ಗೆ ವಿಶೇಷ ಒಲವುಳ್ಳ ರೇಣುಕಾ ಪ್ರಸಾದ್ ಅವರು ಇದೀಗ ದೆಹಲಿಯ ವಿಶೇಷ ವರದಿಗಾರರಾಗಿ ಸೇವೆ ಸಲ್ಲಿಸಲಿದ್ದಾರೆ. ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಸ್ವಾಗತವನ್ನು ಬಯಸುತ್ತೇವೆ.

## ಕರ್ನಾಟಕ ಬ್ಯಾಂಕಿನ ದೆಹಲಿ ವಲಯದ ಉಪ ಮಹಾಪ್ರಭಂದಕರಾಗಿ ಸುಭಾಷ್‌ಚಂದ್ರ ಪುರಾಣಿಕ್



ಕರ್ನಾಟಕ ಬ್ಯಾಂಕಿನ ದೆಹಲಿ ವಲಯದ ಉಪ ಮಹಾ ಪ್ರಭಂದಕರಾಗಿ ಸುಭಾಷ್‌ಚಂದ್ರ ಪುರಾಣಿಕ್ ಅವರು ತಮ್ಮ ಕಾರ್ಯಭಾರವನ್ನು ವಹಿಸಿಕೊಂಡಿದ್ದಾರೆ. ಮೈಸೂರು ಪ್ರಾದೇಶಿಕ ಕಛೇರಿಯಿಂದ ದೆಹಲಿಗೆ ಆಗಮಿಸಿರುವ ಪುರಾಣಿಕ್ ಅವರು ದೆಹಲಿಗೆ ಹೊಸಬರೇನಲ್ಲ. ಕರ್ನಾಟಕ ಬ್ಯಾಂಕಿನ ಸೇವೆಯನ್ನು 1983ರಲ್ಲಿ ದೆಹಲಿಯಲ್ಲಿ ಆರಂಭಿಸಿದ ಇವರು 1991ರವರೆಗೆ ದೆಹಲಿ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು ಹಾಗೂ ಮತ್ತೊಮ್ಮೆ 2000 ದಿಂದ 2002ರವರೆಗೆ ದೆಹಲಿಯ ಓವರ್‌ಸೀಸ್ ಶಾಖೆಯಲ್ಲಿ ಚೀಫ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ. ಮಂಗಳೂರು, ತಿರುಪುರ್ ಹಾಗೂ ಮುಂಬೈನಲ್ಲೂ ಸೇವೆ ಸಲ್ಲಿಸಿರುವ ಪುರಾಣಿಕ್ ಅವರು ಇದೀಗ ದೆಹಲಿ, ಪಂಜಾಬ್, ರಾಜಸ್ಥಾನ್, ಹರಿಯಾಣ, ಉತ್ತರಪ್ರದೇಶ ಹಾಗೂ ಉತ್ತರಾಂಚಲ್ ಆರು ವಲಯದ ಒಟ್ಟು 41 ಶಾಖೆಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ದೇಶದೆಲ್ಲಡೆ ಸಮರ್ಥ ಬ್ಯಾಂಕಿಂಗ್ ಸೇವೆಯ ಮೂಲಕ ಮುಂಚೂಣಿಯಲ್ಲಿರುವ ಕರ್ನಾಟಕ ಬ್ಯಾಂಕ್ ಸುಭಾಷ್‌ಚಂದ್ರ ಪುರಾಣಿಕ್ ಅವರ ದಕ್ಷ ಕಾರ್ಯಭಾರದಲ್ಲಿ ಮತ್ತಷ್ಟು ಪ್ರಗತಿ ಹೊಂದುವುದರಲ್ಲಿ ಸಂಶಯವೇ ಇಲ್ಲ. ಮತ್ತೊಮ್ಮೆ ದೆಹಲಿಗೆ ಆಗಮಿಸಿರುವ ಪುರಾಣಿಕ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಸ್ವಾಗತ ಬಯಸುತ್ತೇವೆ.

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಹಿಂಬದಿ ಚಿತ್ರ
ಚೆನ್ನು ಎಸ್. ಮಠದ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ
ಸಂಪುಟ 21 ಸಂಚಿಕೆ 9
ಜೂನ್ 2011, ಬೆಲೆ ರೂ. 1

# ಮನದ ಮಾತು

ಸ್ತ್ರೀ 'ಅಸೂರ್ಯಂ ಪಶ್ಯೆ' ಅನ್ನುವ ಕಾಲವೊಂದಿತ್ತು. ಅಂದರೆ ಸೂರ್ಯನ ಕಿರಣಗಳೂ ಸ್ತ್ರೀಯನ್ನು ಸ್ಪರ್ಶಿಸಬಾರದು. ಅವಳು ಗೃಹಬಂಧಿ. ಮನೆ, ಮಕ್ಕಳ ಲಾಲನೆ, ಪಾಲನೆ ಅವಳ ಕಾರ್‍ಯಕ್ಷೇತ್ರ. ಗಂಡ ಹೇಗೇ ಇರಲಿ, ಎಂತೇ ಇರಲಿ ಅವನು ಪರದೈವ. ತಲೆ ತಗ್ಗಿಸಿ ಆಜ್ಞೆಗಳನ್ನು ಪರಿಪಾಲಿಸುವುದಷ್ಟೇ ಅವಳ ಕರ್ತವ್ಯ. ಪ್ರಶ್ನಿಸುವುದು ಅವಳ ಹಕ್ಕಲ್ಲ. ಈ ಮೂಲಭೂತವಾದ ಸ್ತ್ರೀಯನ್ನು ನಾಲ್ಕುಗೋಡೆಗಳ ನಡುವೆ ಬಂಧಿಯಾಗುವಂತೆ ಮಾಡಿತ್ತು. ಇಂಗ್ಲಿಷ್ ವಿದ್ಯಾಭ್ಯಾಸ, ಆಧುನಿಕ ದೃಷ್ಟಿಕೋನಗಳು ಮಹಿಳೆಯರಿಗೆ ಸ್ವಲ್ಪ ಸ್ವಲ್ಪ ಬೆಳಕು ತೋರಿದವು. ಇಷ್ಟೆಲ್ಲಾ ಆದರೂ ಮದುವೆಯಾಗದೆ ಒಬ್ಬ ಹೆಣ್ಣು ಒಂಟಿಯಾಗಿ ಉಳಿಯುವುದು ಅಸಾಧ್ಯವಾಗಿತ್ತು. ಹೆಣ್ಣಾಗಿ ಹುಟ್ಟುವುದು ಮದುವೆ ಎಂಬ ವಿಧಿಗಾಗಿಯೇ ಎಂಬುದು ನಿಶ್ಚಿತವಾಗಿ ಹೋಗಿತ್ತು. ಆದರೆ ಕ್ರಮೇಣ ಮದುವೆ ಎಂಬ ಬಂಧನವನ್ನು ತಿರಸ್ಕರಿಸಿ ಅಲ್ಲಿ ಇಲ್ಲಿ ವಿರಳವಾಗಿ ಕೆಲವು ಹೆಣ್ಣು ಮಕ್ಕಳು ಅರ್ಥಪೂರ್ಣವಾಗಿ ಬದುಕಿ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದರು. ಕಾರ್ಪೊರೇಟ್ ಯುಗ ಆರಂಭವಾಗುತ್ತಿದ್ದಂತೆ ವೃತ್ತಿಯ ಮೇಲಣ ಆಸಕ್ತಿ ಪ್ರಧಾನ ಅನ್ನಿಸಿ ಬಹಳಷ್ಟು ಸ್ತ್ರೀಯರು ಅವಿವಾಹಿತರಾಗಿ ಉಳಿದು ಸಾಧನೆ ಮಾಡಿದ್ದಾರೆ. ಪ್ರಸಿದ್ಧ 'Almost Single' ಕೃತಿಯ ಲೇಖಕಿ ಅದ್ವೈತಕಾಲ ಪ್ರಕಾರ ಆಕೆ ಒಂಟಿಯಾಗಿದ್ದುದ್ದರಿಂದಲೇ ಬರವಣಿಗೆ ವೃತ್ತಿಯನ್ನು ತದೇಕಚಿತ್ತವಾಗಿ ಕೈಗೊಳ್ಳಲು ಸಾಧ್ಯವಾಯಿತು. ಅದ್ವೈತಕಾಲ ತಮ್ಮ ಕೃತಿಯಲ್ಲಿ ಬರೆದಿರುವ ಈ ಸಾಲುಗಳನ್ನು ಗಮನಿಸಿ–"ಲೇಖಕಿಯಾದ್ದರಿಂದ ನನಗೆ ಸ್ವಾತಂತ್ರ್ಯ ಮತ್ತು ಏಕಾಂತತೆ ಅವಶ್ಯವಿತ್ತು. ಬಹುಶಃ ನನಗೊಂದು ನನ್ನದೇ ಆದ ಸಂಸಾರವಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ; ಆದರೂ ಭಾರತದಲ್ಲಿ ಈಗಲೂ ಮಹಿಳೆ ಅಂದಾಕ್ಷಣ ಹೆಂಡತಿ, ತಾಯಿ, ಅತ್ತೆ ಹೀಗೆ ಅನೇಕ ಅವತರಣಿಕೆಗಳಲ್ಲಿ ಕಾಣಿಸಿಕೊಳ್ಳಲೇ ಬೇಕು".

ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಪೂರ್ವ ಭಾರತದ ಪ್ರತಿಷ್ಠಿತ ರಾಜ್ಯ ಪಶ್ಚಿಮ ಬಂಗಾಳದಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳಾ ಮುಖ್ಯಮಂತ್ರಿಯಾದ ಖ್ಯಾತಿ ಮಮತಾ ಬ್ಯಾನರ್ಜಿ 'ದೀದಿ' ಅವರಿಗೆ ಸಲ್ಲುತ್ತದೆ. ಇವರು ಅವಿವಾಹಿತರು. ಚುನಾವಣಾ ಪ್ರಚಾರ ಸಭೆಗಳಲ್ಲಿ ಆಕೆ ಘೋಷಿಸಿದ್ದು ಹೀಗೆ–'ನನಗೆ ಯಾವುದೇ ಕುಟುಂಬ ಇಲ್ಲ. ನನಗಿರುವ ಕುಟುಂಬ ಎಂದರೆ ನೀವೇ'. ಮಾಯಾವತಿ 'ಬಹೆನ್‌ಜೀ' ಈಗಾಗಲೇ ಉತ್ತರಪ್ರದೇಶದ ಚುಕ್ಕಾಣಿ ಹಿಡಿದಿರುವ ಮತ್ತೊಬ್ಬ ಅವಿವಾಹಿತ ಮಹಿಳೆ. 'ನಾನು ಚಮ್ಮಾರನ ಮಗಳು. ಒಂಟಿಯಾದ ನನಗೆ ನಿಮ್ಮ ಸೇವೆಯೇ ಪರಮ ಗುರಿ' ಎಂದು ಸಾರಿ ಇಂದು ದೇಶದ ಅತಿ ದೊಡ್ಡ ರಾಜ್ಯವನ್ನು ಮುನ್ನಡೆಸುತ್ತಿದ್ದಾರೆ. ದಕ್ಷಿಣದಲ್ಲಿ ತಮಿಳುನಾಡು ರಾಜ್ಯದ ಮುಖ್ಯಮಂತ್ರಿಯಾಗಿರುವ ನಮ್ಮ ಕನ್ನಡತಿ ಜಯಲಲಿತಾ ಕೂಡ ಅವಿವಾಹಿತೆ. ಅವರೀಗ ತಮಿಳಿಗರಿಗೆ 'ಅಮ್ಮ'. ಸಮಾಜ ವಿಜ್ಞಾನಿ ಶಿವ ವಿಶ್ವನಾಥನ್ ಅವರ ಪ್ರಕಾರ–"ಮಹಿಳಾ ರಾಜಕಾರಣಿಗಳು ಅದರಲ್ಲೂ ಅವಿವಾಹಿತರು ಭಾರತ ಜನಮಾನಸಕ್ಕೆ ಹೆಚ್ಚು ಆಪ್ಯಾಯಮಾನರು; ಏಕೆಂದರೆ ಅವರು ಜನಪರ ತೀರ್ಮಾನಗಳನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ಕೈಗೊಳ್ಳಬಲ್ಲರು ಹಾಗೂ ಕಡಿಮೆ ಭ್ರಷ್ಟರು". ಭಾರತದಂತಹ ಸನಾತನ ಪರಂಪರೆಯನ್ನು ಗೌರವಿಸುವ ದೇಶದಲ್ಲಿ ಮಹಿಳೆ ಇಷ್ಟೆಲ್ಲ ಸಾಧನೆ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಸಂಗತಿ.

ಮಹಿಳೆ ತನ್ನೆಲ್ಲ ಗುರಿ ಸಾಧಿಸಲು ಒಂಟಿಯಾಗಿಯೇ ಇರಬೇಕೆಂದಿಲ್ಲ. ಮದುವೆಯ ನಂತರ ಗಂಡ ಹಾಗೂ ಅತ್ತೆ ಮಾವಂದಿರು ಪ್ರೀತಿ ತುಂಬಿದ ಬೆಂಬಲವಿತ್ತರೆ ಮಹಿಳೆ ಪ್ರಗತಿ ಕಾಣಲು ಸಾಧ್ಯ. ಇದಕ್ಕೆ ಉದಾಹರಣೆಯಾಗಿ ಭಾರತದ ಪ್ರಧಾನಿಯಾಗಿ ಶ್ರೀಮತಿ ಇಂದಿರಾಗಾಂಧಿ ಹಾಗೂ ರಾಷ್ಟ್ರಪತಿ ಶ್ರೀಮತಿ ಪ್ರತಿಭಾಸಿಂಗ್ ಪಾಟೀಲ್ ಸಾಕ್ಷಿಯಾಗಿದ್ದಾರೆ. ಬಹುಶಃ ಇದು ನೆರವೇರುವುದು ಪುರುಷರ ಮನಸ್ಸಿನಲ್ಲಿ ಸ್ತ್ರೀ ಕೂಡ ಸರಿಸಮಾನಳು ಎಂಬ ಸದ್ಭಾವನೆ ನೆಲೆಯೂರಿದಾಗ ಮಾತ್ರ. ಈ ಭಾವನೆಯೂ ಈಗೀಗ ಬೆಳೆಯುತ್ತಿದೆ. ಏಕೆಂದರೆ ಭಾರತ ಎಷ್ಟೇ ಸನಾತನ ನಂಬಿಕೆಯಿಂದ ತುಂಬಿ ತುಳುಕುತ್ತಿದ್ದರೂ ಅರ್ವಾಚೀನ ಅಂದರೆ ಅತ್ಯಂತ ನೂತನ ವಿಚಾರಗಳಿಗೂ ವೇದಿಕೆಯಾದ ಪುಣ್ಯಭೂಮಿ. ಹನ್ನೆರಡನೇ ಶತಮಾನದಲ್ಲಿಯೇ ಬಸವಣ್ಣನವರು ಸ್ತ್ರೀ ಸ್ವಾತಂತ್ರ್ಯಕ್ಕೆ ನಾಂದಿ ಹಾಡಿದರು, ಸ್ತ್ರೀ ಸಮಾನತೆಯನ್ನು ಗೌರವಿಸಿದರು. ಶರಣ ಪ್ರಮಥರ ಅನುಭವ ಮಂಟಪದಲ್ಲಿ ಗಂಡ, ಸಂಸಾರಗಳನ್ನು ತೊರೆದು ಬಂದು ದಿಟವನ್ನರಸುತ್ತಿದ್ದ ಮಹದೇವಿ ಅಕ್ಕ ಅನುಪಮ ಸ್ಥಾನ ಪಡೆದಳು. ಹೀಗೆ ಗಾಢಾಂಧಕಾರದಲ್ಲೂ ಬೆಳಕಿನ ಬುಗ್ಗೆಗಳನ್ನು ಚಿಮ್ಮಿಸುವ ಸಾಮರ್ಥ್ಯದ ನಮ್ಮ ದೇಶ ಜಾಗತಿಕ ಶಕ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಶೇಕಡ ಐವತ್ತರಷ್ಟು ಮಹಿಳೆಯರು ಪ್ರಗತಿಪಥದಲ್ಲಿ ಪುರುಷರಿಗೆ ಸರಿಸಮಾನವಾಗಿ ಹೆಜ್ಜೆಗಳನ್ನಿಡುತ್ತಿದ್ದಾರೆ! ಇಡಲಿದ್ದಾರೆ !!

*ದೆಹಲಿಯ ಬಿರು ಬೇಸಿಗೆಯ ಸುಡು ಬಿಸಿಲಿನಲ್ಲಿ ಎತ್ತೆತ್ತ ನೋಡಿದರೂ ಮನಸ್ಸಿಗೆ ಮುದ ನೀಡುವ ಇಡೀ ಮರವೇ ಹೊಂಬಣ್ಣವಾದ ಹೂವಿನ ಮರ. ಗೊಂಚು ಗೊಂಚಲಾಗಿ ತೂಗಿ ತೊನೆದಾಡುವ ಹೂವಾಗಿ ಅರಳಿ, ಉದುರಿ ಚಿನ್ನದ ಹಾಸಿಗೆಯಂತೆ ಕಂಗೊಳಿಸುವ ಅಮಲ್‌ತಾಸ್ ಹೂ ಮರಗಳು ದೆಹಲಿಯ ರಸ್ತೆಯ ಇಕ್ಕೆಲಗಳಲ್ಲಿ–ನಿಮಗಾಗಿ ಈ ಬಾರಿ 'ಅಭಿಮತ'ದ ಇಬ್ಬದಿಗಳಲ್ಲಿ ! !*

❑ ಉಷಾ ಭರತಾದ್ರಿ

# ಅಂತರಾಳದಿಂದ. . .

## ದೆಹಲಿ ಬೇಸಿಗೆಯ ಚಿತ್ರಗಳು

ದೆಹಲಿಯಲ್ಲಿ ಈಗ ಕಡು ಬೇಸಿಗೆ. ಜೂನ್ ತಿಂಗಳಲ್ಲಿ ಅದು ಝಳದ ಪರಮಾವಧಿಯನ್ನು ತಲುಪಬೇಕು. ಈ ಬಾರಿ ಯಾಕೋ ಎಂದಿನಂತಿಲ್ಲ. ಬಿಸಿಲಿನ ಝಳ ಏರಿದಂತೆ, ಇನ್ನೇನು ನಲವತ್ತು-ನಲವತ್ತೈದು ಮುಟ್ಟಿತು ಎಂಬಂತಾದಾಗ, ಎಲ್ಲಿಂದಲೋ ಅಮರಿಸಿಕೊಂಡು ಬರುವ ಕಾರ್ಮೋಡಗಳು ನಾಲ್ಕಾರು ಹನಿ ಮಳೆ ಸುರಿಸಿ ಊರಿನ ತುಂಬ ತಂಪಿನ ಗಾಳಿ ಬೀಸುವಂತೆ ಮಾಡುತ್ತಿವೆ. ದೆಹಲಿಯಲ್ಲಿ ಅದರಲ್ಲೂ ಉತ್ತರ ಭಾರತದ ಹೆಚ್ಚಿನ ಭಾಗಗಳಲ್ಲಿ ಅಷ್ಟಿಷ್ಟು ಮಳೆಯಾಗುತ್ತಿದೆ. ಹೀಗೆ ಬರುವ ಮಳೆಗೆ ನಾವು ದೆಹಲಿಗರು ಸಂತಸ ಪಟ್ಟರೆ, ಹರಿಯಾಣ, ಪಂಜಾಬ್ ಹಾಗೂ ಉತ್ತರಪ್ರದೇಶದ ರೈತರು ಅಷ್ಟೇನೂ 'ಖುಷ್' ಆದಂತೆ ಕಾಣುವುದಿಲ್ಲ. ಅಕಾಲಿಕ ಮಳೆ...ಧೂಳು-ಗಾಳಿಯಿಂದ ತುಂಬಿದ ಮಳೆಯಿಂದ ಇದ್ದ-ಬಿದ್ದ ಬೆಳೆಗಳಿಗೆ, ರೈತಾಪಿ ಕೆಲಸಗಳಿಗೆ ನೂರಾರು ತೊಂದರೆ. ನಿಚ್ಚಳ ಬಿಸಿಲಿನಲ್ಲಿ ಅರಿಶಿಣದಲ್ಲಿ ಮಿರಿಮಿರಿ ಮಿಂಚುವ ಅಮಲ್‌ತಾಸ್ ಗಿಡಮರಗಳು ಈ ಮಳೆಯ ದೆಸೆಯಿಂದಾಗಿ ಬೇಗ ಬೇಗ ಎಲೆಗಳನ್ನು ಮೂಡಿಸಿಕೊಂಡು ಬಿಟ್ಟಿವೆ. ಮೇ ತಿಂಗಳ ಉದ್ದಕ್ಕೂ, ಜೂನ್ ತಿಂಗಳ ಕೊನೆಯವರೆಗೂ ದೆಹಲಿಯ ಉದ್ದಗಲಕ್ಕೂ ಅರಿಶಿಣದ ಗೊಂಡೆ ಹೂವುಗಳ ಗೊಂಚಲಿನಿಂದ ತುಂಬಿಕೊಂಡು, ನಾಚಿ ನಿಲ್ಲುವ ಈ ಅಮಲ್‌ತಾಸ್ ಗಿಡಗಳು ('ಮೇ ಫ್ಲವರ್' ಎನ್ನಿ ಬೇಕಾದರೆ) ದೆಹಲಿಯ ಬೇಸಿಗೆಗೆ ರಂಗು ತುಂಬುತ್ತವೆ.

ಚಳಿಗಾಲದ ನವಿರಾದ ಲವಲವಿಕೆ ದೆಹಲಿಯ ಬೇಸಿಗೆಗೆ ಇಲ್ಲ. ಹತ್ತಾರು ಹೆಜ್ಜೆ ನಡೆದರೆ ಸಾಕು. ಬೆವರಿನ ಹನಿಗಳು ಮೈತುಂಬ ಹರಿಯುವ ಅನುಭವ. ದೆಹಲಿಯ ಬೇಸಿಗೆಗೆ ನಾವೆಲ್ಲ ಈ ಬಗೆಯಲ್ಲಿ ಬೆವರುವುದರಿಂದ ದೇಹದ ಕೊಳೆಗಳು-ಕಲ್ಮಷಗಳು ತೊಳೆದು ಹೋಗುತ್ತವೆ ಎಂಬುದು ಕೆಲವರ ವಾದ. ಬೆಂಗಳೂರಿನ ವಾತಾವರಣವನ್ನೇ ನೋಡಿ, ಮೈ ಬೆವರುವುದಕ್ಕೆ ಹೆಚ್ಚಿನ ಆಸ್ಪದವೇ ಇಲ್ಲ. ಅಲ್ಲಿ ಆಗಾಗ್ಗೆ ತುಂಬಿದ ಮೋಡಗಳು, ಮಳೆ. . . ವಾತಾವರಣದಲ್ಲಿ ಒಂದು ಬಗೆಯ ಆದ್ರತೆ. ಆದರೆ ದೆಹಲಿಯ ಬಿಸಿಲು ಹಾಗಲ್ಲ. ಹೊರಬಿದ್ದರೆ ಎತ್ತಿ 'ರಪ್' ಎಂದು ಮೈಗೆ ಅಪ್ಪಳಿಸುತ್ತದೆ. ಈ ಝಳದ ಉರಿಗೆ ಸಿಕ್ಕು ನಲುಗಿದವರೆಷ್ಟೊ ಮಂದಿ. ಏನೇ ಇದ್ದರೂ ದೆಹಲಿಯ ಬಡಬಗ್ಗರಿಗೆ ಬೇಸಿಗೆಯೆಂದರೆ ತೀರಾ ಕಷ್ಟದಾಯಕವೆನಿಸುವುದಿಲ್ಲ. ಸಹಿಸಿಕೊಳ್ಳಲಾಗದ ಚಳಿಗಿಂತ ಇದೇ ಎಷ್ಟೋ ವಾಸಿ. ರಾತ್ರಿ ಹತ್ತು-ಹನ್ನೊಂದರ ನಂತರ ದೆಹಲಿಯ ವಿಶಾಲ ಫುಟ್‌ಪಾತುಗಳ ಮೇಲೆ ಅಲ್ಲಲ್ಲಿ ಗುಂಪುಗುಂಪಾಗಿ ಮಲಗುವ ಜನಸಮುದಾಯವೇ ಇದಕ್ಕೆ ಸಾಕ್ಷಿ. ಚಳಿಗಾಲದಲ್ಲಾದರೆ ಯಾವುದೋ ಗೂಡನ್ನು ಅರಸಿಕೊಂಡು ಹೋಗಬೇಕಾದ ಪ್ರಮೇಯ. ಚಳಿಗಾಳಿಯಲ್ಲಿ ತುಂಬಿಕೊಳ್ಳುವ ಉರಿಯನ್ನು ತಾಳಿಕೊಳ್ಳಲಾಗದೇ ಹಪಹಪಿಸುವ ಸಾವಿರಾರು ಜನರಿಗೆ ಬೇಸಿಗೆಯೆಂಬುದು ಹಬ್ಬದ ದಿನಗಳಂತೆ. ದೆಹಲಿಯ ವಿಸ್ತಾರವಾದ ಸತ್ತೆಯ ಹಾಗೂ ಹಣ ಪ್ರಪಂಚದಲ್ಲಿ ಇದೊಂದು ದೊಡ್ಡ ವಿಪರ್ಯಾಸ. ನಮ್ಮ ಬೆಳವಣಿಗೆಯ ಹುಚ್ಚಾಟದ ಮೂಲಮಂತ್ರದ ಕೀಲುಗಳೇ ಎಲ್ಲೋ ತಪ್ಪಿ ಹೋದಂತೆ ಭಾಸವಾಗುತ್ತದೆ.

ಅತ್ತ ಸಾವಿರಾರು ಮೈಲು ದೂರದಲ್ಲಿ ಈ ಉರಿಬೇಸಿಗೆಯನ್ನು ತಬ್ಬಿಕೊಳ್ಳುವ ತವಕದಲ್ಲಿ ಆತುರಾತುರವಾಗಿ ಬರತೊಡಗಿದ 'ಮಾನ್ಸೂನ್' ಈಗ ಒಂದು ಬಗೆಯ ರೋಚಕ, ರೋಮಾಂಚಕ ಸುದ್ದಿ ಸಂಗ್ರಹವಾಗಿ ಮಾರ್ಪಟ್ಟಿದೆ. ಅಂಡ್‌ಮಾನ್ ತಟಕ್ಕೆ ಬಂದ 'ಮಾನ್ಸೂನ್', ಕೇರಳದ ತಟವನ್ನು ಕರಾರುವಕ್ಕಾಗಿ ತಲುಪಿ ಗೋವಾ, ಮಂಗಳೂರು, ಮುಂಬಯಿಯತ್ತ ಧಾವಿಸುತ್ತಿದೆ. ಇನ್ನು ದೇಶದ ತುಂಬ 'ಮಾನ್ಸೂನ್' ನರ್ತನ. ಇಡೀ ದೇಶಕ್ಕೊಂದು ಹೊಸ ಕಳೆ. ದೆಹಲಿಗೆ ಎಂದು ಬರುವುದೋ ಈ 'ಮಾನ್ಸೂನ್'? ಪ್ರತಿ ವರುಷದಂತೆ ಜೂನ್ 29ರ ಆಸುಪಾಸಿನಲ್ಲಿ ಬರಬೇಕು. ಬಂದ ಹಾಗೆ ಮಾಡಿ ಹೋದರೂ ಆಯಿತು. ಹವಾಮಾನ ಇಲಾಖೆಯವರಿಗೆ ಮುನ್ಸೂಚನೆ ನೀಡುವ ಕೆಲಸ. ನಂತರ, ಈ ಮುನ್ಸೂಚನೆಯಂತೆ ಯಾಕೆ ಈ 'ಮಾನ್ಸೂನ್' ಬರಲಿಲ್ಲ ಎಂದು ಸಮುರ್ಥಾಯಿಸಿ ಹೇಳುವುದೇ ಇನ್ನೊಂದು ಕೆಲಸ. ಒಟ್ಟಾರೆ ಒಂದು ಬಗೆಯ ಗೊಂದಲ. ಇವತ್ತು ಬರಲಿ, ನಾಳೆ ಬರಲಿ. . .ಬರದೇ ಹೋಗಲಿ, ನಾವು-ನೀವು "ರಾಗಿ ಬೀಸುವುದು ತಪ್ಪುತ್ತದೆಯೇ?".

ಈ ಪ್ರಕೃತಿಯ ಮಸ್ತಿಯನ್ನೇ ನೋಡಿ. ಕಳೆದ ಒಂದೆರಡು ದಶಕಗಳಿಂದ ತೀರಾ ಕಲ್ಮಷವಾದ ಯಮುನೆಯನ್ನು ಸ್ವಚ್ಛಗೊಳಿಸಬೇಕೆಂಬುದರ ಬಗ್ಗೆ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಸಾವಿರಾರು ಕೋಟಿ ರೂಪಾಯಿಗಳ ಯೋಜನೆಗಳು ಇದಕ್ಕಾಗಿ ತಯಾರಾಗಿವೆ. ಈ ಎಲ್ಲ ವಿಚಾರಗಳು ಸುಪ್ರೀಂಕೋರ್ಟಿನ ಕಟಕಟೆಯನ್ನು ತಲುಪಿದೆ. ಯಾರೂ ಮಾಡಲಾಗದ್ದನ್ನು ಮಳೆರಾಯ ಮಾಡುವ ಪರಿಯನ್ನೇ ನೋಡಿ. ಕಳೆದ ಮಳೆಗಾಲದಲ್ಲಿ ಸೊಕ್ಕಿ ಹರಿದ ಯಮುನೆ ತನ್ನ ಎಲ್ಲ ಕಲ್ಮಷಗಳನ್ನು ತೊಳೆದುಕೊಂಡ ಬಗೆಯನ್ನು ಯಾವ ರೀತಿಯಲ್ಲಿ ವಿವರಿಸಲಿ? ಯಮುನೆ ಎಲ್ಲ ಕೊಳೆಯನ್ನು ಕಳೆದುಕೊಂಡು ಪರಿಶುದ್ಧಳಾಗಿ ಹರಿದರೂ. . .ನಾವು ಮತ್ತೆ ಕಲ್ಮಷಗಳನ್ನು ಅದರ ಉಡಿಯಲ್ಲಿ ತುಂಬುತ್ತಿದ್ದೇವೆ. 'ಮಾನ್ಸೂನ್' ದೆಹಲಿಗೆ ಬರದಿದ್ದರೆ ಈ ಯಮುನೆ ಪೂರಾ ಬಡವಾಗಿ. . .ಒಂದು ದಿನ ಬತ್ತಿ ಹೋಗಿಯಾಳು, ಆದರೆ, ಈ ಪ್ರಕೃತಿಯ ಉಡಿಯಲ್ಲಿ ಇವೆಲ್ಲವನ್ನೂ ಸರಿಪಡಿಸಿಕೊಳ್ಳಲುಬೇಕಾದ ಎಲ್ಲ ಸಲಕರಣೆಗಳು ಇವೆ. ನಾವು ಸುಮ್ಮನಿರಬೇಕಷ್ಟೇ.

ಹೀಗೆಲ್ಲ ಬರೆಯುತ್ತ ನಾನು ನಮ್ಮ ಕರ್ನಾಟಕದ ಪಶ್ಚಿಮ ಘಟ್ಟಗಳನ್ನೇ ಮರೆತೆನೇ? ಮಳೆಯ ಅಬ್ಬರವಿಲ್ಲದಿದ್ದರೆ ಈ ಘಟ್ಟಗಳಿಗೆ ಶಕ್ತಿಸಂಚಯವಾಗುವುದು ಎಲ್ಲಿಂದ? ಅದೇ ಇನ್ನೊಂದು ಕಥೆ. ಈ ದೆಹಲಿಯ ಬೇಸಿಗೆಯಲ್ಲಿ ಕುಳಿತ ನನಗೆ ಈ ಪಶ್ಚಿಮಘಟ್ಟದ ನೆನಪುಗಳು ಯಾಕೋ ದೆಹಲಿಯನ್ನೇ ಒಂದು ಬಗೆಯ ಪ್ರೀತಿಯ ನೇವರಿಕೆಯಲ್ಲಿ ಹಿಡಿದಿಟ್ಟಂತೆ ಇದೆ. ಬೇಸಿಗೆಯಲ್ಲಿ ಚಳಿಗಾಲದ ನೆನಪು; ಚಳಿಗಾಲದಲ್ಲಿ ಬೇಸಿಗೆಯ ನೆನಪು. . .ಇದೇ ದೆಹಲಿಯ ಮಸ್ತಿ.

❑ ಡಾ. ವೆಂಕಟಾಚಲ ಹೆಗಡೆ

**ಪ್ರತಿ ತಿಂಗಳು 10 ಅಥವಾ 11ನೇ ತಾರೀಖು 'ಅಭಿಮತ' ವನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ. ಒಂದು ವಾರದೊಳಗಾಗಿ ನಿಮಗೆ ತಲುಪದೇ ಇದ್ದಲ್ಲಿ ದಯಮಾಡಿ ನಮ್ಮ ಸಂಪರ್ಕಿಸಿ : 26109615, 65643615**

## ದೆಹಲಿಯಲ್ಲಿ ತೆಂಕು-ಬಡಗು ಯಕ್ಷಗಾನ ಪ್ರದರ್ಶನ, ಪ್ರಾತ್ಯಕ್ಷಿಕೆ ಮತ್ತು ತಾಳಮದ್ದಳೆ

ಆಗಸ್ಟ್ 5,6 ಹಾಗೂ 7, 2011ರಂದು ದೆಹಲಿಯ ಕರ್ನಾಟಕ ಸಂಘದ ಆವರಣದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟಿನ ಸುಪ್ರಸಿದ್ಧ ಕಲಾವಿದರ ಕೂಡುವಿಕೆಯೊಂದಿಗೆ 3 ದಿನಗಳ ಕಾಲ ಯಕ್ಷಗಾನ ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆ ಪ್ರದರ್ಶನ, ತಾಳಮದ್ದಳೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಶ್ರೀ ಕುಂಬಳೆ ಸುಂದರರಾವ್ ತಿಳಿಸಿದ್ದಾರೆ. ದೆಹಲಿಯ ಅಕಾಡೆಮಿಯ ಆಫ್ ತೆಂಕುತಿಟ್ಟು ಯಕ್ಷಗಾನದ ಜೊತೆ ಸೇರಿ ದೆಹಲಿಯಲ್ಲಿ ನಡೆಸಲಾಗುವ ಈ 3 ದಿನಗಳ ಕಾರ್ಯಕ್ರಮದಲ್ಲಿ ದೆಹಲಿಯ ಕನ್ನಡಿಗರಿಗಾಗಿ ಹಾಗೂ ಕನ್ನಡೇತರರಿಗೂ ಯಕ್ಷಗಾನದ ಕುರಿತ ಸ್ಥೂಲ ಪರಿಚಯವನ್ನು ಕಾರ್ಯಕ್ರಮದ ಮೂಲಕ ನೀಡುವ ಉದ್ದೇಶ ಹೊಂದಿರುವ ಎರಡೂ ಅಕಾಡೆಮಿಗಳು ಕಾರ್ಯಕ್ರಮವನ್ನು ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಸೇರಿದಂತೆ ಸಿಸಿಆರ್‌ಟಿಯಂತಹ ಸಂಸ್ಥೆಗಳಲ್ಲಿಯೂ ಪ್ರಾತ್ಯಕ್ಷಿಕೆಗಳನ್ನು ನೀಡಲಿವೆ. ದೆಹಲಿಯ ಕರ್ನಾಟಕ ಸಂಘದ ಆವರಣದಲ್ಲಿ ಉದ್ಘಾಟನೆಗೊಳ್ಳುವ ಈ ಕಾರ್ಯಕ್ರಮಕ್ಕೆ ದೆಹಲಿಯ ಸಮಸ್ತ ಕನ್ನಡಿಗರ ನೆರವು ಬೆಂಬಲವನ್ನು ಕೋರಿದ್ದಾರೆ. ಸಂಘದ ಆವರಣದಲ್ಲಿ ನಡೆಯಲಿರುವ ವಿಚಾರ ಸಂಕಿರಣ, ಪ್ರದರ್ಶನ, ತಾಳಮದ್ದಳೆಗಳ ಕುರಿತಾಗಿ ಕಾರ್ಯಕ್ರಮದ ವಿವರವನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.

❑ ಸರವು ಕೃಷ್ಣ ಭಟ್

## ಮುನ್ನೋಟ

ಈ ಬಾರಿ ದೆಹಲಿ ಕರ್ನಾಟಕ ಸಂಘದಲ್ಲಿ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಮಾತೃ ಭಾಷೆ ಕನ್ನಡ ಮತ್ತು ಸಂಗೀತವನ್ನು ಕಲಿಸುವ ಕಾರ್ಯಕ್ರಮಗಳನ್ನು ಜುಲೈ/ಆಗಸ್ಟ್ ತಿಂಗಳಿನಲ್ಲಿ ಪ್ರಾರಂಭ ಮಾಡಲಿದೆ.

ಈ ಬಾರಿಯ ಕೇಂದ್ರ ಲೋಕ ಸೇವಾ ಆಯೋಗ ಪರೀಕ್ಷೆಗಳು ನಡೆದಿದ್ದು ಅದರಲ್ಲಿ ಕರ್ನಾಟಕದಿಂದ ಸುಮಾರು 40 ಮಂದಿ ಉತ್ತೀರ್ಣರಾಗಿರುತ್ತಾರೆ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು. ಜೊತೆಗೆ ಸಂಘದ ಆವರಣದಲ್ಲಿ ಕೃಷಿಕ್ ಸರ್ವೋದಯ ಫೌಂಡೇಶನ್‌ರವರು ಹಿರಿಯ ಐ.ಎ.ಎಸ್. ಅಧಿಕಾರಿಗಳಿಂದ ಐ.ಎ.ಎಸ್ ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆ ನಡೆಸಿದರಲ್ಲಿ ಸುಮಾರು 18 ಜನ ಐ.ಎ.ಎಸ್., ಐ.ಪಿ.ಎಸ್., ಐ.ಆರ್.ಎಸ್. ರ್‍ಯಾಂಕಿಂಗ್‌ನಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಮೌಖಿಕ ಸಂದರ್ಶನದಲ್ಲಿ ಭಾಗವಹಿಸಿ ಉತ್ತೀರ್ಣಗೊಂಡ ಕಾರ್ತಿಕ್ ರೆಡ್ಡಿ ಮತ್ತು ಯತೀಶ್‌ಚಂದ್ರ ಅವರು 12.5.2011ರಂದು TV9 ನೇರ ಪ್ರಸಾರ ಸಂದರ್ಶನದಲ್ಲಿ ದೆಹಲಿ ಕರ್ನಾಟಕ ಸಂಘವನ್ನು ಹೃದಯಪೂರ್ವಕವಾಗಿ ಅಭಿನಂದಿಸಿದ್ದಾರೆ. ಇದು ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಹೆಮ್ಮೆಯ ವಿಷಯ. ಜೊತೆಗೆ ಕೃಷಿಕ್ ಫೌಂಡೇಶನ್ನಿನ ಪದಾಧಿಕಾರಿಗಳಾದ ಗುಡ್ಡೇಗೌಡ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಪಿ.ಸಿ. ಶ್ರೀನಿವಾಸ್, ಡಾ. ಚಂದ್ರೇಗೌಡ ಹಾಗೂ ಅನಂತರಾಮ ಅರಳಿ, ಶಿವರಾಂರವರಿಗೆ ಮತ್ತು ಭಾಗವಹಿಸಿದ ಹಿರಿಯ ಎಲ್ಲಾ ಐ.ಎ.ಎಸ್. ಅಧಿಕಾರಿಗಳಿಗೂ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

ಕೃಷಿಕ್ ಫೌಂಡೇಶನ್ ಕರ್ನಾಟಕದ ಯಾವುದೇ ಒಂದು ಹಳ್ಳಿಯಿಂದ ಬಡ ವಿದ್ಯಾರ್ಥಿಗಳು ದೆಹಲಿಗೆ ಬಂದಾಗ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ ಅವರಿಗೆ ಅನುಕೂಲವಾಗುವಂತೆ ಮಾಡುತ್ತಾ ಬರುತ್ತಿದೆ. ದೆಹಲಿ ಕರ್ನಾಟಕ ಸಂಘವೂ ಸಹ ಸಹಯೋಗ ನೀಡುತ್ತಾ ಬರುತ್ತಿದೆ. ಇನ್ನು ಮುಂದೆಯೂ ಸಹ ನೀಡುತ್ತದೆ. ಕೇಂದ್ರ ಲೋಕ ಸೇವಾ ಆಯೋಗ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕದಿಂದ ವಿದ್ಯಾರ್ಥಿಗಳು ಉತ್ತೀರ್ಣಗೊಂಡು ಐ.ಎ.ಎಸ್., ಐ.ಪಿ.ಎಸ್,. ಐ.ಆರ್.ಎಸ್. ಅಧಿಕಾರಿಗಳಾಗಲೆಂದು ಹಾರೈಸುತ್ತೇನೆ.

❑ ಸಿ.ಎಂ.ನಾಗರಾಜ

# ಸಂಘ ನನ್ನ ಎರಡನೇ ತೌರುಮನೆ

"ದೆಹಲಿ ಕರ್ನಾಟಕ ಸಂಘ" ಸೆಕ್ಟರ್–12, ಆರ್.ಕೆ. ಪುರಂ, ನವದೆಹಲಿ –ಅದೇ ನನ್ನ ಎರಡನೇ ತೌರು ಮನೆ! ಸಂಘದ ಮೆಟ್ಟಿಲೇರುತ್ತಲೇ ಕಸ್ತೂರಿ ಕಂಪು. ತೇರಿನ ತಂಪು. ತನು–ಮನಗಳೆರಡರಲ್ಲೂ ಸಂತಸ–ಸಂಭ್ರಮ. ತೌರ ನೆನಪು ಬೆಳದಿಂಗಳಾಗಿ ಮನದಂಗಳದಲ್ಲಿ ಹಬ್ಬುತ್ತದೆ.

ಮೇ 2006ರಲ್ಲಿ ದಿಲ್ಲಿಗೆ ಪೋಸ್ಟಿಂಗ್ ಆಗಿ ಬಂದೆವು. ಜುಲೈ 2007ರಲ್ಲಿ ನಮ್ಮವರ ಗೆಳೆಯರಾದ ಶ್ರೀ ಇಸ್ಮಾಯಿಲ್ ಬುಡಂದಿಯವರು ನಮ್ಮನ್ನು ಸಂಘಕ್ಕೆ ಪರಿಚಯಿಸಿ, ಸದಸ್ಯರನ್ನಾಗಿಸಿದರು. ಒಂದು ವರ್ಷದ ತನಕ ಆಗಾಗ ಶನಿವಾರ–ರವಿವಾರಗಳಂದು ಸಂಘಕ್ಕೆ ಬಂದು ಹೋಗಿ ಮಾಡುತ್ತಿದ್ದೆವು. ಒಳ್ಳೆಯ ಸಾಹಿತ್ಯ, ಸಂಗೀತ, ನಾಟಕ ಹಾಗೂ ಯಕ್ಷಗಾನದ ಕಾರ್ಯಕ್ರಮಗಳಿದ್ದರೆ ನಾವಿಬ್ಬರೂ ಮಕ್ಕಳೊಂದಿಗೆ ಬರುತ್ತಿದ್ದೆವು. ಅಷ್ಟಾಗಿ ಯಾರದ್ದೂ ಪರಿಚಯ ಇರಲಿಲ್ಲ. ಮುಖದ ಗುರುತಿನಿಂದ ಹಾಯ್–ಹಲೋಗಳಾಗುತ್ತಿದ್ದವಷ್ಟೇ. 2008ರ ಯುಗಾದಿ ಸಂಚಿಕೆಗೋಸ್ಕರ 'ಯುಗಾದಿ ಕವನ ಸ್ಪರ್ಧೆ'ಯಿದ್ದು, ಕವನ ಕಳಿಸಲು ತಿಳಿಸಿ, 'ಅಭಿಮತ'ದಲ್ಲಿ ಜಾಹೀರಾತು ಬಂದಿತ್ತು. ಸರಿ! ನಾನೂ ಕವನವೊಂದನ್ನು ಬರೆದು ಕಳಿಸಿದೆ. ಕೆಲವೇ ದಿನಗಳಲ್ಲಿ ಅಭಿಮತದಿಂದ ಕವನ ಕಳಿಸಿದ್ದಕ್ಕೆ ಧನ್ಯವಾದ ಸಲ್ಲಿಸಿ ಪತ್ರವೊಂದು ಬಂದಿತು. ಪತ್ರದ ಅಡಿಯಲ್ಲಿ ಶ್ರೀಮತಿ ಉಷಾ ಭರತಾದ್ರಿಯವರ ಹೆಸರು. ಅಭಿಮತದ ಪ್ರಧಾನ ಸಂಪಾದಕಿಯಾದ ಅವರ ಹೆಸರು ನೋಡಿ, ನನಗೋ ವಿಪರೀತ ಖುಷಿಯಾಯಿತು. ಮುಂದೆ ಯುಗಾದಿ ಸಂಚಿಕೆಯಲ್ಲಿ ಕವನ ಪ್ರಕಟವೂ ಆಯಿತು.

ಅದರ ಮುಂದಿನ ಬಾರಿ ಸಂಘಕ್ಕೆ ಹೋದಾಗ ಶ್ರೀಮತಿ ಉಷಾ ಭರತಾದ್ರಿಯವರನ್ನು ಭೆಟ್ಟಿಯಾಗಿ, ನನ್ನ ಪರಿಚಯ ಹೇಳಿಕೊಂಡೆ. ಮೊದಲ ಸಲದಲ್ಲೇ ಅವರು ನನ್ನನ್ನು ಅದೆಷ್ಟು ಆತ್ಮೀಯವಾಗಿ ಕಂಡರೆಂದರೆ, ನನಗೆ ನಾವೆಷ್ಟೋ ವರುಷಗಳ ಹಳೆಯ ಬಾಂಧವರೆನ್ನಿಸಿತು. ಒಂದೇ ನೋಟದಲ್ಲಿ ಎದೆಯೊಳಕ್ಕೆ ಇಳಿದರು. ಕವನಗಳನ್ನು ಬರೆದು, ಅಭಿಮತಕ್ಕೆ ಕಳಿಸಲು ನನ್ನನ್ನು ಹುರಿದುಂಬಿಸಿದರು. ನನ್ನ ಬಹಳಷ್ಟು ಕವನಗಳನ್ನು ಪ್ರಕಟಿಸಿದರು. ಅವರಿಂದಲೇ ದೊಡ್ಡ ಪಂಡಿತರೂ, ವಿಮರ್ಶಕರೂ ಮತ್ತು ಸಾಹಿತಿಗಳೂ ಆದ ಡಾ. ಪುರುಷೋತ್ತಮ ಬಿಳಿಮಲೆ ಸರ್ ಅವರ ಪರಿಚಯವಾಯಿತು. ಅವರು ನನ್ನ ಕವನಗಳನ್ನೋದಿ ಮೆಚ್ಚಿ, ವಿಮರ್ಶಿಸಿ, ಸೂಕ್ತ ಸಲಹೆಗಳನ್ನು ನೀಡಿದ್ದನ್ನು ನಾನು ಎಂದೂ ಮರೆಯಲಾರೆ. ಸಂಘದ ಆವರಣದಲ್ಲಿ ಅನಾಯಾಸವಾಗಿ ಒದಗಿ ಬಂದ ಅದೃಷ್ಟವದು ! ಇವರಿಬ್ಬರೂ ಹಿರಿಯರ ಸರಳತೆ–ಸಜ್ಜನಿಕೆ, ಪ್ರೀತಿ–ವಿಶ್ವಾಸಗಳಲ್ಲಿ ನಾನು ತೌರು ಮನೆಯವರ ಆತ್ಮೀಯತೆಯನ್ನು ಕಂಡಿದ್ದೇನೆ.

ಸಂಘದಲ್ಲಿ ಪರಿಚಯವಾದ ಅತ್ಯಂತ ಚಟುವಟಿಕೆಯ ವ್ಯಕ್ತಿ–ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು. ಇವರೂ ನನಗೆ ಸಾಕಷ್ಟು ಬೆಂಬಲ ನೀಡಿ, ನನ್ನ ಕವನಗಳನ್ನು ಅಭಿಮತದಲ್ಲಿ ಪ್ರಕಟಿಸಿದ್ದಾರೆ. ಶ್ರೀಮತಿ ಮತ್ತು ಶ್ರೀಯುತ ಕಲುಮಂಗಿಯವರ ಸ್ನೇಹ, ಡಾ. ಹೇಮಲತಾ ಅವರ ಅಭಿಮಾನ, ಶ್ರೀಮತಿ ರೇಣುಕಾ ನಿಡಗುಂದಿಯವರ ವಿಶ್ವಾಸ, ಹಿರಿಯರಾದ ಶ್ರೀಮತಿ ಅಹಲ್ಯಾ ಚಿಂತಾಮಣಿಯವರ ಹಾರೈಕೆ, ಶ್ರೀಮತಿ ಜಲಜಾರಾಜುರವರ ಆತ್ಮೀಯತೆ, ಇನ್ನೂ ಅದೆಷ್ಟೋ ಸಹೃದಯರ ಪ್ರೀತಿ ವಿಶ್ವಾಸ– ಇವೆಲ್ಲ, ಇವರೆಲ್ಲ ನಾನು ಸಂಘದಲ್ಲಿ ಗಳಿಸಿದ ಅಮೂಲ್ಯ ನಿಧಿ–ಬಳಗ !

ಅದೆಷ್ಟೋ ನಾಟಕಗಳು, ಸಾಹಿತ್ಯ ಮತ್ತು ವಿಚಾರ ಗೋಷ್ಠಿಗಳು, ನೃತ್ಯ–ಸಂಗೀತದ ಕಾರ್ಯಕ್ರಮಗಳು, ಹಾಸ್ಯ ಸಂಜೆಗಳು, ಸಂಗೀತ–ನಾಟಕ ಶಿಬಿರಗಳು, ಕವಿ–ಕಲಾವಿದರನ್ನು ಕಣ್ಣಾರೆ ನೋಡುವ, ಮಾತಾಡುವ ಅವಕಾಶಗಳು, ಕನ್ನಡದ ಸಾಹಿತಿ–ಪಂಡಿತರನ್ನು ಎದುರು ಕುಳಿತು ಆಲಿಸುವ ಭಾಗ್ಯ, ದೊಡ್ಡ ಮಂತ್ರಿ ಮಹೋದಯರನ್ನು ಒಂದೇ ವೇದಿಕೆಯ ಮೇಲೆ ನೋಡಿ ಸಂತೋಷಿಸುವ ಅದೃಷ್ಟ, ಜೀವನದ ಅದೆಷ್ಟೋ ಸುಂದರ ಸಂಜೆಗಳು–ಇವೆಲ್ಲ ಸಾಧ್ಯವಾದದ್ದು ಸಂಘದ ಮನೆಯಂಗಳದಲ್ಲಿ !

ಪ್ರತೀ ಕಾರ್ಯಕ್ರಮದ ನಂತರದ ಆಕರ್ಷಣೆ–ಅಚ್ಚ ಕನ್ನಡದ ರುಚಿಯೂಟ! ಬಿಸಿ ಅನ್ನ, ಹುಳಿ, ಹಪ್ಪಳ, ಚಟ್ನಿ, ಉಪ್ಪಿನಕಾಯಿ, ಪೂರಿ–ಪಲ್ಯ, ಹೋಳಿಗೆ, ಚಿತ್ರಾನ್ನ, ಹೆಸರು ಬೇಳೆ ಪಾಯಸ ಹಾಗೂ ಮೊಸರನ್ನ–ಆಹಾ! ಸಾಕೆ? ಸಂಘದ ಎಲ್ಲ ಬಾಂಧವರಿಗೆ ತಮ್ಮೂರು, ಮನೆ, ತಮ್ಮ ಅಮ್ಮನ ಕೈಯಡುಗೆ ನೆನಪಾಗದಿದ್ದರೆ ಹೇಳಿ. (ಎಷ್ಟೋ ಸಲ ಈ ಸವಿಯೂಟದ ಆಮಿಶ ತೋರಿಸಿ, ನನ್ನ ಮಕ್ಕಳನ್ನು ಕಾರ್ಯಕ್ರಮಕ್ಕೆ ಕರೆತಂದಿದ್ದೇನೆ.

ವರುಷ ಒಂದಾಗುವುದರಲ್ಲಿ ಸಂಘದ ಒಡನಾಟ ಹೆಚ್ಚಿತು. ಸಂಘದ ಕಾರಣವೊಂದರಿಂದಲೇ ದಿಲ್ಲಿಯೂ ಸೇರಹತ್ತಿತು. (ಮೊದಮೊದಲು ದಿಲ್ಲಿ ನನಗೆ ಅಷ್ಟು ಹಿಡಿಸಿದ್ದಿಲ್ಲ. ಎಲ್ಲೋ ಕಳೆದು ಹೋದ ಭಾವವಿರುತ್ತಿತ್ತು) ಇಲ್ಲಿ ಸೇರುವ ಕನ್ನಡಿಗರೊಡನೆ ಬಾಂಧವ್ಯ ಬಲಿಯತೊಡಗಿತು. ದ್ವಾರಕಾದಿಂದ ಆರ್.ಕೆ. ಪುರಂಗೆ ಬಂದು, ಮಠಕ್ಕೆ ಹೋಗಿ ರಾಯರ ದರ್ಶನ ಪಡೆದು, ಸಂಘಕ್ಕೆ ಬರುವುದು ನಿಯಮವಾದಂತಾಯಿತು. ಕನ್ನಡ ಜನ, ಕನ್ನಡ ನುಡಿ, ಕನ್ನಡ ಸಂಸ್ಕೃತಿ, ಕನ್ನಡ ಕಾರ್ಯಕ್ರಮ, ಕನ್ನಡದ ಹಬ್ಬ–ಹರಿದಿನ, ಕನ್ನಡದ ಊಟ–ತಿಂಡಿ, ಕನ್ನಡ ಪುಸ್ತಕ–ಪತ್ರಿಕೆಗಳು. . . ದಿಲ್ಲಿ ಕರ್ನಾಟಕ ಸಂಘ ಎಂದರೆ ಪುಟ್ಟ ಕರ್ನಾಟಕವೇ ಸೈ! ಎನ್ನಿಸಹತ್ತಿತು. ಕಳೆದು ಹೋದದ್ದೇನೋ ಸಿಕ್ಕಂತೆನಿಸತೊಡಗಿತು. ನಮಗೆ ನಾವೇ ಹೊಸಬರೆನಿಸಿಸಹತ್ತಿತು. ಈ ತೌರ ಸುಖದಲ್ಲಿ ನಮ್ಮೂರನ್ನೂ ಮರೆತೆವೇನೋ ಎನ್ನಿಸತೊಡಗಿತು.

ಅಷ್ಟರಲ್ಲಿ ಬಂದಿತು ನಮ್ಮವರಿಗೆ ದೂರದ ಉತ್ತರಪ್ರದೇಶದಲ್ಲಿ ಪೋಸ್ಟಿಂಗ್. ಭಾರತೀಯ ವಾಯುಸೇನೆಯಲ್ಲಿ ಅಧಿಕಾರಿಯಾದ ನಮ್ಮೆಜಮಾನರಿಗೆ ಎರಡೂವರೆ ಮೂರು ವರ್ಷಕ್ಕೊಮ್ಮೆ ಪೋಸ್ಟಿಂಗ್ ಸಾಮಾನ್ಯವೇ. ಅವರೊಡನೆ ನಾವೂ ಕೂಡ ಯಾವ ಊರಿಂದಲಾದರೂ, ಯಾವ ಊರಿಗಾದರೂ ಹೊರಡುತ್ತೇವೆ–ದಿವ್ಯ ನಿರ್ಲಿಪ್ತ ಭಾವದಿಂದ. ಆದರೆ ಈ ಸಲ ಮೊಟ್ಟ ಮೊದಲ ಬಾರಿಗೆ ಮನಸ್ಸು ಭಾರವಾಯಿತು. ಸಂಘ ಬಿಟ್ಟು ಹೋಗಬೇಕಲ್ಲ ! ಇಂತಹ ಕನ್ನಡದ ವಾತಾವರಣ ಸುಖ ಇನ್ನೆಲ್ಲಿ? ಯಾಕೋ ಬಹಳೇ ಬೇಸರ ಆಯಿತು. ಆದರೆ ಅನಿವಾರ್ಯ. ತೌರ ಹೊಸ್ತಿಲು ದಾಟುವಾಗ ಹೆಜ್ಜೆ ಭಾರ, ಹೃದಯ ಭಾರ.

ಅರೇ! 'ಅಭಿಮತ' ವಿದೆಯಲ್ಲ ! ನಾವೆಲ್ಲಿ ಹೋದರೂ, ಎಷ್ಟು ದೂರ ಹೋದರೂ, ಸಂಘದೊಡನೆ, ಸಂಘದ ಬಾಂಧವರೊಡನೆ ಬೆಸೆಯುವ ಕೊಂಡಿಯಿದೆಯಲ್ಲ !! 'ಅಭಿಮತ'ದ ಸೇತುವೆಯಿಂದ ಸಾಗಿ ಮತ್ತೆ ಮತ್ತೆ ಸಂಘಕ್ಕೆ ಬರುವೆನು. 'ಅಭಿಮತವಾಣಿ' ಮುಖೇನ ನಮ್ಮವರೆಲ್ಲರೊಡನೆ ಮಾತಾಡುವೆನು. ಸಂಘ ಉಡಿ ತುಂಬಿ ಕಳಿಸಿದ ಪ್ರೀತಿ ವಿಶ್ವಾಸವನ್ನು ಎದೆಯ ಕಪಾಟಿನಲ್ಲಿ ಭದ್ರವಾಗಿಟ್ಟಿರುವೆನು. "ತೇರು ನೂರ್ಮಡಿಯಾಗಿ ಬೆಳೆದು, ಹಬ್ಬಿ ಹಂದರವಾಗಲಿ ; ಮತ್ತೂ ಸುಂದರವಾಗಲಿ" ಎಂದು ಸದಾ ಹಾರೈಸುವ ಅಭಿಮಾನಿ ಮಗಳು ನಾನು.

❑ ನೂತನ ಆರ್. ಕುಲಕರ್ಣಿ,
ಅಮೇಥಿ, ಉತ್ತರಪ್ರದೇಶ

# “ಬಸವಣ್ಣನವರ ತತ್ವಗಳ ಅರ್ಥವನ್ನು ಬದುಕಿನಲ್ಲಿ ಕಂಡುಕೊಳ್ಳಿ, ಶಬ್ದಕೋಶದಲ್ಲಿ ಹುಡುಕಬೇಡಿ”

**ರಂಜಾನ್ ದರ್ಗಾ**




ಎಡದಿಂದ ಬಲಕ್ಕೆ : ಅಮರನಾಥ ತಳವಾಡೆ, ಪ್ರಭಾಕರ ಕೋರೆ, ಡಾ. ವೆಂಕಟಾಚಲ ಹೆಗಡೆ ಹಾಗೂ ರಂಜಾನ್ ದರ್ಗಾ

“ದಯವೇ ಧರ್ಮದ ಮೂಲ, ಕಾಯಕವೇ ಕೈಲಾಸ, ಮರಣವೇ ಮಹಾನವಮಿ, ಉಳ್ಳವರು ಶಿವಾಲಯ ಮಾಡುವರು, ಕಾಯಕ–ಪ್ರಸಾದ–ದಾಸೋಹ, ಮಹಾಮನೆ–ಹೀಗೆ ಸುಮಾರು ಎಂಟು ಶತಮಾನಗಳ ಹಿಂದೆಯೇ ಬಸವಣ್ಣನವರು ಪ್ರತಿಪಾದಿಸಿದ ವಿಚಾರಧಾರೆಗಳ ಅಂತಃಸತ್ವವನ್ನು ನಮ್ಮ ನಮ್ಮ ಬದುಕಿನಲ್ಲಿ ಹುಡುಕಿಕೊಳ್ಳಬೇಕೇ ಹೊರತು, ಶಬ್ದಕೋಶಗಳಲ್ಲಿ ಹುಡುಕುವ ವ್ಯರ್ಥಪ್ರಯತ್ನ ಮಾಡಬಾರದು”. ಇವು ವಿದ್ವಾಂಸರಾದ ರಂಜಾನ್ ದರ್ಗಾ ಅವರ ಸ್ಪಷ್ಟ ಮಾತುಗಳು. ಬೀದರ್‌ನ ಬಸವ ಅಧ್ಯಯನ ಕೇಂದ್ರದ ನಿರ್ದೇಶಕ ಹಾಗು ಖ್ಯಾತ ಪತ್ರಕರ್ತ ದರ್ಗಾ ಅವರು ದೆಹಲಿ ಕರ್ನಾಟಕ ಸಂಘ ಹಾಗೂ ಬಸವ ಇಂಟರ್ ನ್ಯಾಷನಲ್ ಸೆಂಟರ್, ನವದೆಹಲಿ ಇವುಗಳ ಸಹಯೋಗದಲ್ಲಿ 7.5.2011ರಂದು ಹಮ್ಮಿಕೊಳ್ಳಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ವಿಚಾರಧಾರೆಗಳನ್ನು ಕುರಿತಾಗಿ ಮಾತನಾಡಿದರು.

ದಾರ್ಶನಿಕ ಬಸವಣ್ಣನವರನ್ನು ಕೇವಲ ಧರ್ಮಗುರುವನ್ನಾಗಿ ಮಾತ್ರ ನೋಡುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದ ರಂಜಾನ್ ದರ್ಗಾ ಅವರು ಸುಮಾರು ಒಂದೂವರೆಗಂಟೆ ಕಾಲ ನಿರರ್ಗಳವಾಗಿ ಸಂತನ ರೀತಿಯಲ್ಲಿ ಬಸವತತ್ವಗಳ ಪ್ರಸ್ತುತತೆಯನ್ನ ವಿವರಿಸುತ್ತಾ ಇವತ್ತಿನ ಬದುಕಿನ ಎಲ್ಲ ಸಮಸ್ಯೆಗಳಿಗೆ ಅವುಗಳಲ್ಲಿ ಉತ್ತರ ಕಂಡುಕೊಳ್ಳಬಹುದಾಗಿದೆ ಎಂದರು. ಮನುಷ್ಯನಿಗೆ ಮಾತ್ರವಲ್ಲದೆ ಸಕಲ ಜೀವಿಗಳಿಗೂ ಬದುಕುವ ಹಕ್ಕು ಇದೆ ಎಂಬುದನ್ನು ಮೊಟ್ಟಮೊದಲ ಬಾರಿಗೆ ಪ್ರತಿಪಾದಿಸಿದವರು ಬಸವಣ್ಣ.

ಬ್ರಾಹ್ಮಣನಾಗಿ ಹುಟ್ಟಿದ್ದರಿಂದ ಆ ಧರ್ಮದ ಗುಣದೋಷಗಳು, ಭಂಡಾರಿಯಾಗಿದ್ದರಿಂದ ವೈಶ್ಯ ಧರ್ಮದ ಒಳಿತು ಕೆಡುಕುಗಳು, ದಂಡ ನಾಯಕನಾಗಿದ್ದುದರಿಂದ ಕ್ಷತ್ರಿಯತ್ವದ ಏಳುಬೀಳುಗಳು, ಮಾದಾರ ಚೆನ್ನಯ್ಯನ ಮಗ ಎಂದು ಸಂಭೋದಿಸಿಕೊಂಡ ಬಸವಣ್ಣನಿಗೆ ಶೂದ್ರರ ಸಮಸ್ಯೆಗಳೆಲ್ಲವೂ ಚೆನ್ನಾಗಿ ಅರ್ಥವಾಗಿದ್ದವು. ಚಾತುರ್ವರ್ಣ ವ್ಯವಸ್ಥೆಯ ಗುಣದೋಷಗಳನ್ನು ಅರ್ಥಮಾಡಿಕೊಂಡು ಹೊಸ ಮನುಷ್ಯನನ್ನು ಸೃಷ್ಟಿಸಿದರು. ಅವನನ್ನು ‘ಶರಣ’ ಎಂದು ಕರೆದರು. ಈ ರೀತಿಯ ಹೊಸ ಸಂವೇದನಗಳ ಮೂಲಕ ಹೊಸ ಸೃಷ್ಟಿಯ ಕುರಿತು ಮಾತನಾಡಿದಾಗ ನಮಗೆ ಬಸವಣ್ಣ ಅರ್ಥವಾಗುತ್ತಾನೆ ಎಂದು ಅನೇಕ ವಿವರಣೆಗಳ ಮೂಲಕ ಮಹಾನ್ ದಾರ್ಶನಿಕ, ಅರ್ಥಶಾಸ್ತ್ರಜ್ಞ, ಮುತ್ಸದ್ಧಿ, ಸಮರ್ಥ ದಂಡನಾಯಕ, ಸಮಾಜ ಸುಧಾರಕ, ಕ್ರಾಂತಿಯೋಗಿ ಬಸವಣ್ಣನವರನ್ನು ಮನಮುಟ್ಟುವಂತೆ ಅರ್ಥೈಸಿದರು.

ತುಳಿತಕ್ಕೊಳಗಾದವರನ್ನು ಸಂವೇದನಾಶೀಲತೆಯಿಂದ ಕಾಣುತ್ತಿದ್ದ ಬಸವಣ್ಣನವರು, ದಲಿತರು, ಮಹಿಳೆಯರಿಗೆ ಸಮಾನತೆ, ಶಿಕ್ಷಣ, ಸ್ವಾತಂತ್ರ ಮತ್ತು ಮುಕ್ತ ಅಭಿವ್ಯಕ್ತಿಗಳಿಗೆ ಮೊದಲ ಆದ್ಯತೆ ನೀಡಿ ಅಂದಿನ ಕಾಲದಲ್ಲೇ ಅವೆಲ್ಲವನ್ನು ಸಾಧ್ಯವಾಗಿರಿಸಿದ್ದರೆಂಬುದು ಮಹಾಮನೆಯಲ್ಲಿನ ಸಂವಾದಗಳು ಹಾಗು ವಚನಗಳ ಮೂಲಕ ತಿಳಿಯಬರುತ್ತದೆ. ಬಸವಣ್ಣನವರು ಪ್ರತಿಪಾದಿಸಿದ ತತ್ವಗಳಲ್ಲಿ ಕಾಯಕ, ಪ್ರಸಾದ, ದಾಸೋಹ ಬಹಳ ಮುಖ್ಯವಾಗಿದೆ. ಕಣ್ಣಿಗೆ ಕಾಣುವುದು ಪ್ರಜ್ಞೆಯಾದರೆ ಅಂತರಂಗದ ಕಣ್ಣಿಗೆ ಕಾಣುವುದು ಅರಿವು. ಅರಿವೇ ಗುರು. ಆ ಗುರು ನಮ್ಮೊಳಗೇ ಇದ್ದಾನೆ ಎಂಬ ಅರಿವನ್ನು ಸರಳ ವಚನಗಳ ಮೂಲಕ ಜನಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಹೇಳಿದರು. ಇಂದಿನ ವಿಶ್ವಸಂಸ್ಥೆಯಿಂದ ಮಾನ್ಯತೆಗೊಳಗಾಗಿರುವ 30 ಮಾನವ ಹಕ್ಕುಗಳು ಸಹ ಅವರ ವಚನಗಳಲ್ಲಿವೆ.

ದೆಹಲಿ ಕನ್ನಡಿಗ, ಹಿಂದೂಸ್ತಾನಿ ಗಾಯಕ ಭೀಮಸೇನ ಭಜಂತ್ರಿ ಅವರು ‘ಛಲಬೇಕು ಶರಣಂಗೆ’ ವಚನ ಗಾಯನದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ದೆಹಲಿ ಕರ್ನಾಟಕ ಸಂಘ ಹಲವಾರು ವರ್ಷಗಳಿಂದ ಬಸವ ಜಯಂತಿಯನ್ನು ಆಚರಿಸಿಕೊಂಡು ಬಂದುದನ್ನು ಸ್ಮರಿಸುತ್ತಾ “850 ವರ್ಷಗಳ ಹಿಂದೆಯೇ ಬಸವಣ್ಣ ಜನಸಾಮಾನ್ಯರಿಗೆ ಅರ್ಥವಾಗುವ ಅತ್ಯಂತ ಸರಳ ಭಾಷೆಯಲ್ಲಿ ವಚನಗಳ ಮೂಲಕ ವಿಚಾರ ಕ್ರಾಂತಿಯನ್ನು ಸಾರಿದವರು. ‘ಕಾಯಕವೇ ಕೈಲಾಸ’ ಎರಡೇ ಶಬ್ದಗಳಲ್ಲಿ ಇಡೀ ಜೀವನದ ತತ್ವವಿದೆ. ಬದುಕಿನ ಸಾರವಿದೆ. ಬಸವಣ್ಣ ಕನ್ನಡ ಸಾಹಿತ್ಯವನ್ನು ವಚನ ಸಾಹಿತ್ಯದ ಕೊಡುಗೆಯಿಂದ ಸಮೃದ್ಧವಾಗಿಸಿದ್ದಾರೆ” ಎನ್ನುತ್ತ ಅತಿಥಿಗಳನ್ನು ಸ್ವಾಗತಿಸಿದರು.

ಬಸವ ಇಂಟರ್ ನ್ಯಾಷನಲ್ ಸೆಂಟರ್–ನವದೆಹಲಿಯ ಅಧ್ಯಕ್ಷ, ಅಮರನಾಥ ತಳವಾಡೆ ಅವರು ಹನ್ನೆರಡನೇ ಶತಮಾನದ ‘ಕಾಯಕವೇ ಕೈಲಾಸ’ ಇಂದು 21ನೆ ಶತಮಾನದಲ್ಲೂ ಹೇಗೆ ಪ್ರಸ್ತುತವಾಗುತ್ತದೆಂಬ ಮಾತನ್ನು ಹೇಳುತ್ತ, ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ ಕುರಿತು ಕ್ರಾಂತಿಮಾಡಿದ ಬಸವಣ್ಣ ಪ್ರಜಾಪ್ರಭುತ್ವದ ಜನಕ ಎಂದರೂ ತಪ್ಪಿಲ್ಲ ಎಂಬ ವಿಚಾರಗಳನ್ನು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಹೇಳಿದರು.

ಜಾನಪದ ವಿದ್ವಾಂಸ, ವಿಮರ್ಶಕ ಡಾ. ಪುರುಷೋತ್ತಮ ಬಿಳಿಮಲೆ ತಮ್ಮ ನಿಡುಗಾಲದ ಗೆಳೆಯ ರಂಜಾನ್ ದರ್ಗಾ ಅವರನ್ನು ‘ಕ್ರಾಂತಿಯ ಮಂತ್ರ ಹೇಳುವ ಕಾಲದಲ್ಲಿ ಶಾಂತಿಯ ಮಂತ್ರ ಹೇಳಿದ ಸಂತ, ಶರಣ ರಂಜಾನ್ ದರ್ಗಾ’ ಎಂದು ಆತ್ಮೀಯತೆಯಿಂದ ಪರಿಚಯಿಸಿದರು. 12ನೇ ಶತಮಾನದ ವಚನಗಳನ್ನು 18–19ನೇ ಶತಮಾನದ ಸೂಫಿಗಳು ಬಸವಣ್ಣನವರ ತತ್ವಗಳನ್ನು ಒಳಸೇರಿಸಿಕೊಂಡು ತತ್ವಪದಗಳಾಗಿ ಮರುಸೃಷ್ಟಿಸಿಕೊಂಡರು ಎನ್ನುತ್ತ ವಚನ ತಾತ್ವಿಕವು ಇಡೀ ಕರ್ನಾಟಕದ ಚಿಂತನಾಕ್ರಮವನ್ನು ಬದಲಿಸಿದ ಬಗೆಯನ್ನು ವೈಚಾರಿಕ ನೆಲೆಯಲ್ಲಿ ವಿವರಿಸಿದರು. ವಚನ ಸಾಹಿತ್ಯವನ್ನು ಕ್ರೋಢಿಕರಿಸಿ ತಮ್ಮ ಬರಹಗಳ ಮೂಲಕ ಪುನಃ ಪರಿಚಯಿಸುವ ಕಾರ್ಯವನ್ನು ರಂಜಾನ್ ದರ್ಗಾ ಆಸಕ್ತಿ ವಹಿಸಿ ಮಾಡುತ್ತಿರುವುದರಿಂದ ಅವರು ನಮ್ಮ ಕಾಲದ ಪ್ರಮುಖ ಚಿಂತಕರಾಗಿ ವಿಶಿಷ್ಟರಾಗುತ್ತಾರೆ ಎಂದು ಹೆಮ್ಮೆಯಿಂದ ನುಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯಸಭಾ ಸದಸ್ಯ ಪ್ರಭಾಕರಕೋರೆ ಅವರನ್ನು ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ಕಾರ್ಯದರ್ಶಿ ವಿ.ವಿ. ಬಿರಾದಾರ ಅವರು ಸಭಿಕರಿಗೆ ಪರಿಚಯಿಸಿದರು.

ಲಿಂಗಾಯತ/ವೀರಶೈವ ಎಂಬುದು ಧರ್ಮವೇ ಅಥವಾ ಚಳುವಳಿಯೇ? ಜಾತಿಯೇ? ಎಂಬ ಬಗ್ಗೆ, ಬಸವ ಇಂಟರ್ ನ್ಯಾಶನಲ್ ಸೆಂಟರ್‌ನ ಅಧ್ಯಕ್ಷ ಅಮರನಾಥ್ ತಳವಾಡೆ ಅವರು ತಮ್ಮ ಭಾಷಣದ ಸಂದರ್ಭದಲ್ಲಿ ಮಾಡಿದ್ದ



ಮನವಿಗೆ ಪ್ರತಿಕ್ರಿಯಿಸಿ ರಂಜಾನ್ ದರ್ಗಾ ಅವರು 'ದಯವೇ ಧರ್ಮದ ಮೂಲ' ಎಂಬ ವಚನವನ್ನು ವಿಶ್ಲೇಷಿಸಿ ನೋಡಿದರೆ ಜಗತ್ತಿನ ಸಕಲ ಜೀವಿಗಳನ್ನು ಸಹ ಪ್ರೀತಿಸಬೇಕು, ಪ್ರಾಣಿ, ಪಕ್ಷಿಗಳಿಗೂ ಸಹ ಮನುಷ್ಯರಂತೆ ಬದುಕುವ ಹಕ್ಕು ಇದೆ. 'ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ನಮ್ಮ ಕೂಡಲ ಸಂಗಮ ಶರಣರೆ ಕುಲಕರು' ಎಂಬ ಬಸವಣ್ಣನವರ ಚಿಂತನೆ ಕೇವಲ ಲಿಂಗಾಯಿತರು, ಹಿಂದೂಗಳು, ಮುಸ್ಲಿಮರು, ಕನ್ನಡಿಗರು, ಭಾರತೀಯರಷ್ಟೇ ಅಲ್ಲದೆ ಸಕಲ ಜೀವಾತ್ಮರೂ ಒಳಗೊಳ್ಳುತ್ತರಾದುದರಿಂದ ಅವರನ್ನು ದಾರ್ಶನಿಕರನ್ನಾಗಿ ನೋಡಬೇಕೇ ಹೊರತು ಧರ್ಮಗುರು ಮಾತ್ರವಷ್ಟೇ ಆಗಿ ನೋಡಬಾರದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಭಾ ಸದಸ್ಯರಾದ ಸನ್ಮಾನ್ಯ ಪ್ರಭಾಕರ ಕೋರೆಯವರು ರಂಜಾನ್‌ದರ್ಗಾ ಅವರು ಬಸವಣ್ಣನವರ ಒಂದೊಂದು ವಚನಗಳನ್ನು ಸಹ ಆಳವಾಗಿ ಅಧ್ಯಯನ ಮಾಡಿದ್ದರೆಂಬುದು ಅವರ ವಿಚಾರ ಪೂರಿತ ಭಾಷಣದಿಂದ ವ್ಯಕ್ತವಾಗುತ್ತದೆಂಬುದಾಗಿ ತಿಳಿಸುತ್ತಾ ಇಂದು ಅವರ ಬಸವಣ್ಣನವರನ್ನು ಕುರಿತಾದ ಉಪನ್ಯಾಸ ಕೇಳಿದ್ದು ತಮ್ಮ ಸೌಭಾಗ್ಯ ಎಂದು ಹೃತ್ಪೂರ್ವಕವಾಗಿ ಅಭಿನಂದಿಸಿದರು.

ಸ್ವಯಂಪ್ರೇರಿತರಾಗಿ ಕೆಲವು ಮಕ್ಕಳು ವಚನಗಾಯನ ಹಾಡಿದ್ದು ನಿಜಕ್ಕೂ ಶ್ಲಾಘನೀಯವಾಗಿತ್ತು. ಭೀಮಸೇನ ಭಜಂತ್ರಿ ಮತ್ತು ವೀಣಾ ಮರಡೂರ್ ಅವರು ವಚನ ರಸಾಮೃತದಿಂದ ಸುಂದರ ಸಂಜೆಯನ್ನು ಅರ್ಥಪೂರ್ಣಗೊಳಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿಯವರು ಕಾರ್ಯಕ್ರಮವನ್ನು ನಿರ್ವಹಿಸಿದರು ಹಾಗೂ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಮಾಡಿದರು.

**ಚಂದ್ರಶೇಖರ ಎನ್.ಪಿ.**

# ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ ಸಮಾರಂಭ



ದೆಹಲಿ ಕರ್ನಾಟಕ ಸಂಘವು ಇತ್ತೀಚೆಗೆ ಆಯೋಜಿಸಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಸಮಾರಂಭವನ್ನು ಮೇ 1ರಂದು ಆಯೋಜಿಸಲಾಗಿತ್ತು. ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶ್ರೀ ವಿ. ಧನಂಜಯ ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಜೇತರಿಗೆ ಬಹುಮಾನ ವಿತರಣೆ ಮಾಡಿ ಶುಭ ಹಾರೈಸಿದರು. ಕರ್ನಾಟಕ ಸರ್ಕಾರ ಮಂಜೂರಾತಿ ಮಾಡಿರುವ ಒಂದು ಕೋಟಿ ರೂಪಾಯಿಯನ್ನು ಸಮರ್ಪಕವಾಗಿ ವಿನಿಯೋಗಿಸುವಂತೆ ಕಿವಿಮಾತು ಹೇಳುತ್ತಾ ಮತ್ತೆ ಮುಂದಿನ ವರ್ಷವೂ ಹಣ ಬಿಡುಗಡೆ ಮಾಡಿಸುವ ಆಶ್ವಾಸನೆ ಇತ್ತರು. ಕರ್ನಾಟಕದ ರಾಯಭಾರಿ ಸಂಸ್ಥೆಯಾದ ದೆಹಲಿ ಕರ್ನಾಟಕ ಸಂಘವು ಕನ್ನಡಿಗರಿಗಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳನ್ನು ನಿರಂತರವಾಗಿ ನಡೆಸುವಂತೆ ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಪಾಲ್ಗೊಂಡು ನಾಟಕ ಮತ್ತು ಸಂಗೀತ ಕಾರ್ಯಕ್ರಮ ನೀಡಿದ ಸಂಘದ ಕಲಾವಿದರುಗಳಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಉಪಾಧ್ಯಕ್ಷ ಬಿ.ಕೆ. ಬಸವರಾಜು, ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ, ಖಜಾಂಚಿ ಕೆ.ಆರ್. ರಾಮಮೂರ್ತಿ ಸದಸ್ಯರುಗಳಾದ ಆಂಜನಿ ಗೌಡ, ಟಿ.ಎಂ. ಮೈಲಾರಪ್ಪ, ಎಸ್.ಸಿ. ಹೇಮಲತ, ಆನಂದ ಮುರಗೋಡ, ಪಿ.ಸಿ. ಶ್ರೀನಿವಾಸ, ಶಶಿಕಾಂತ್ ಪಾಟೀಲ್ ಇವರುಗಳು ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸ್ವಾಗತಿಸಿದರು. ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಜಂಟಿ ಕಾರ್ಯದರ್ಶಿ ಹಾಗೂ ಕ್ರೀಡಾ ಸಮಿತಿಯ ಸಂಚಾಲಕ ಎನ್.ಆರ್. ಶ್ರೀನಾಥ್ ಅವರು ಕಾರ್ಯಕ್ರಮ ನಿರ್ವಹಿಸಿದರು.



ಕೇರಂ ಡಬಲ್ಸ್ (ಮಹಿಳೆಯರು) ವಿಜೇತರು



ಕೇರಂ ಸಿಂಗಲ್ಸ್ ಮತ್ತು ಡಬಲ್ಸ್ ವಿಜೇತರು



ಕೇರಂ ಸಿಂಗಲ್ಸ್ (ಮಹಿಳೆಯರು) ವಿಜೇತರು



ಚೆಸ್ ವಿಜೇತರು



ಛದ್ಮವೇಷ (6–10ವರ್ಷ) ಸ್ಪರ್ಧೆ ವಿಜೇತರು



ರಂಗೋಲಿ ಸ್ಪರ್ಧೆ ವಿಜೇತರು



ಛದ್ಮವೇಷ (3–6ವರ್ಷ) ಸ್ಪರ್ಧೆ ವಿಜೇತರು



ಭಾವಗೀತೆ ಸ್ಪರ್ಧೆ ವಿಜೇತರು



ಕನ್ನಡ ರೈಮ್ಸ್ ಸ್ಪರ್ಧೆ ವಿಜೇತರು



ಸ್ಮರಣ ಶಕ್ತಿ ಪರೀಕ್ಷೆ (7–10ವರ್ಷ) ಸ್ಪರ್ಧೆ ವಿಜೇತರು



ಸ್ಮರಣ ಶಕ್ತಿ ಪರೀಕ್ಷೆ (10–14 ವರ್ಷ) ಸ್ಪರ್ಧೆ ವಿಜೇತರು



ಚಿತ್ರ ಬರೆಯುವ (3–5ವರ್ಷ) ಸ್ಪರ್ಧೆ ವಿಜೇತರು



ಚಿತ್ರ ಬರೆಯುವ ಸ್ಪರ್ಧೆ(6–9 ವರ್ಷ) ವಿಜೇತರು



50 ಮೀಟರ್ ಓಟ (3–5ವರ್ಷ) ಸ್ಪರ್ಧೆ ವಿಜೇತರು



50 ಮೀಟರ್ ಓಟ (6–8 ವರ್ಷ) ಸ್ಪರ್ಧೆ ವಿಜೇತರು



50 ಮೀಟರ್ ಓಟ (6–8 ವರ್ಷ) ಸ್ಪರ್ಧೆ ವಿಜೇತರು



100 ಮೀಟರ್ ಓಟ (9–11 ವರ್ಷ) ಸ್ಪರ್ಧೆ ವಿಜೇತರು



100 ಮೀಟರ್ ಓಟ (9–11 ವರ್ಷ) ಸ್ಪರ್ಧೆ ವಿಜೇತರು



100 ಮೀಟರ್ ಓಟ (12–15 ವರ್ಷ) ಸ್ಪರ್ಧೆ ವಿಜೇತರು



100 ಮೀಟರ್ ಓಟ (12–15 ವರ್ಷ) ಸ್ಪರ್ಧೆ ವಿಜೇತರು



200 ಮೀಟರ್ ಓಟ (15–20 ವರ್ಷ) ಸ್ಪರ್ಧೆ ವಿಜೇತರು



ಶಾಟ್ ಪುಟ್ (21–39ವರ್ಷ) ಸ್ಪರ್ಧೆ ವಿಜೇತರು


ಶಾಟ್ ಪುಟ್ ಸ್ಪರ್ಧೆ ವಿಜೇತರು


ಶಾಟ್‌ಪುಟ್ ಸ್ಪರ್ಧೆ ವಿಜೇತರು


ಮ್ಯೂಸಿಕಲ್ ಚೇರ್ (6–12ವರ್ಷ) ಸ್ಪರ್ಧೆ ವಿಜೇತರು


ಮ್ಯೂಸಿಕಲ್ ಚೇರ್ ಸ್ಪರ್ಧೆ ವಿಜೇತರು


100 ಮೀಟರ್ ಓಟ ಸ್ಪರ್ಧೆ ವಿಜೇತರು


200 ಮೀಟರ್ ಓಟ ಸ್ಪರ್ಧೆ ವಿಜೇತರು


ಬಕೆಟ್‌ಗೆ ಚೆಂಡು ಹಾಕುವ ಸ್ಪರ್ಧೆ ವಿಜೇತರು


ಬಕೆಟ್‌ಗೆ ಚೆಂಡು ಹಾಕುವ ಸ್ಪರ್ಧೆ ವಿಜೇತರು


200 ಮೀಟರ್ ಓಟ ಸ್ಪರ್ಧೆ ವಿಜೇತರು


ಲಿಂಬೆ ಮತ್ತು ಚಮಚ (31–40 ವರ್ಷ) ಸ್ಪರ್ಧೆ ವಿಜೇತರು


ಲಿಂಬೆ ಮತ್ತು ಚಮಚ (40 ವರ್ಷ ಮೇಲ್ಪಟ್ಟ) ಸ್ಪರ್ಧೆ ವಿಜೇತರು


ಲಿಂಬೆ ಮತ್ತು ಚಮಚ (21–30 ವರ್ಷ) ಸ್ಪರ್ಧೆ ವಿಜೇತರು


ಕ್ವಿಜ್ ಸ್ಪರ್ಧೆ ಪ್ರಥಮ ಸ್ಥಾನ


ಕ್ವಿಜ್ ಸ್ಪರ್ಧೆ ದ್ವಿತೀಯ ಸ್ಥಾನ


ಕ್ವಿಜ್ ಸ್ಪರ್ಧೆ ತೃತೀಯ ಸ್ಥಾನ


ಸೂಜಿಗೆ ದಾರ ಹಾಕುವ ಸ್ಪರ್ಧೆ ವಿಜೇತರು


200 ಮೀಟರ್ ವೇಗ ನಡಿಗೆ ಸ್ಪರ್ಧೆ ವಿಜೇತರು


200 ಮೀಟರ್ ವೇಗ ನಡಿಗೆ ಸ್ಪರ್ಧೆ ವಿಜೇತರು

# ಹೊಸ ತಲೆಮಾರಿನ ಕಾವ್ಯ ಸಂಭ್ರಮದ ರೂಪಕ -



"ಎಚ್.ಎಸ್. ಶಿವಪ್ರಕಾಶ್ ಕನ್ನಡದ ಕವಿಯಷ್ಟೇ ಅಲ್ಲ, ಈ ರಾಷ್ಟ್ರದ ಅತ್ಯಂತ ಮಹತ್ವದ ಕವಿ. ಬಹುಭಾಷಾ ಪಾಂಡಿತ್ಯವುಳ್ಳ ಶಿವಪ್ರಕಾಶ್ ಅಯೋವಾ, ಜಪಾನ್ ಅಲ್ಲದೇ ಅನೇಕ ಯುರೋಪಿಯನ್ ದೇಶಗಳನ್ನು ಸುತ್ತಿ ಹಲವಾರು ಉಪನ್ಯಾಸಗಳನ್ನು ನೀಡಿರುವವರಲ್ಲದೇ ತಮ್ಮ ಕಾವ್ಯ, ನಾಟಕಗಳ ಮೂಲಕ ಬ್ರೆಕ್ಟ್, ಡಾಂಟೆ, ಮೊದಲಾದವರಂತೆ ಯುರೋಪಿಯನ್ ಲೇಖಕರ ಸಾಲಿನಲ್ಲಿ ಗುರುತಿಸಿಕೊಳ್ಳುತ್ತಾರೆ" ಎಂದು ಬಂಗಾಲಿ ಲೇಖಕ, ರಂಗಕರ್ಮಿ, ವಿಮರ್ಶಕ ಹಾಗೂ ಶಿವಪ್ರಕಾಶರ ಆಪ್ತ ಒಡನಾಡಿ ದಿಲೀಪ್ ಬಸು ಅವರು ಅಭಿಪ್ರಾಯಪಟ್ಟರು. ಜರ್ಮನಿಯ ಬರ್ಲಿನ್ ಟ್ಯಾಗೋರ್ ಕೇಂದ್ರ ನಿರ್ದೇಶಕರಾಗಿ ನೇಮಕಗೊಂಡಿರುವ ಸಂದರ್ಭದಲ್ಲಿ ಡಾ. ಎಚ್.ಎಸ್. ಶಿವಪ್ರಕಾಶ್ ಅವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಮೇ 28ರಂದು ಸಂಜೆ ಆತ್ಮೀಯ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. "ಈಗಾಗಲೇ ಶಿವಪ್ರಕಾಶ್ ಅವರ ಮಹಾಚೈತ್ರ, ಮಾದಾರ ಮಾದಯ್ಯ, ಮದುವೆ ಆಟಗಳು ಮತ್ತು ಮಂಟೇಸ್ವಾಮಿ ನಾಟಕಗಳು ಬಂಗಾಲಿ ಭಾಷೆಯಲ್ಲಿ ತರ್ಜುಮೆಗೊಂಡು ಬಂಗಾಲಿ ರಂಗಭೂಮಿಯಲ್ಲಿ ಪ್ರದರ್ಶನಗೊಂಡಿವೆ. 'ಶೂದ್ರಕ' ಎಂಬ ಬಂಗಾಲಿ ಪತ್ರಿಕೆಯಲ್ಲಿ ಸೋವಾ ಬಸು ಎಂಬುವರು ಮಹಾಚೈತ್ರವನ್ನು ಅನುವಾದಿಸಿ ಪ್ರಕಟಿಸಿದ ಮೊದಲಿಗರು. ನಂತರ ದೇವಾಶಿಶ್ ಮುಜುಂದಾರ್ ಅವರು ಮಹಾಚೈತ್ರವನ್ನು ರಂಗದ ಮೇಲೆ ನಿರ್ದೇಶಿಸಿದ್ದರು. ಅವರ ಕಾವ್ಯರೂಪಕಗಳು, ನಾಟಕಗಳು ಅನೇಕ ದೇಶ ಭಾಷೆಗಳ ಮೂಲಕ ಒಂದು ರೀತಿಯ ವಿಭಿನ್ನ ಸಂಸ್ಕೃತಿಗಳ ಮುಖಾಮುಖಿಯಾಗುತ್ತ ಹೊಸದನ್ನು ಕಟ್ಟಿಕೊಡುತ್ತವೆ. ಹೀಗೆ ಶಿವಪ್ರಕಾಶ್ ಕನ್ನಡಕ್ಕಷ್ಟೇ ಸೀಮಿತವಾಗುಳಿಯದೇ ಭಾರತೀಯ ಸಾಹಿತ್ಯ, ಕಾವ್ಯ, ರಂಗಕಲೆಯನ್ನು ಪ್ರತಿನಿಧಿಸುತ್ತಾರೆ. ಭಾರತೀಯ ಕಾವ್ಯಸಂಭ್ರಮದ ರೂಪಕದಂತೆ ಜಗತ್ತಿನ ಶ್ರೇಷ್ಠ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲುತ್ತಾರೆ" ಎಂದು ದಿಲೀಪ್ ಬಸು ಬರ್ಲಿನ್ ಗೆ ತೆರಳಲಿರುವ ಶಿವಪ್ರಕಾಶ್ ಅವರನ್ನು ಅಪ್ಯಾಯತೆಯಿಂದ ಅಭಿನಂದಿಸಿದರು.

ಶಿವಪ್ರಕಾಶ್ ಅವರ ಮತ್ತೋರ್ವ ಆಪ್ತ ಗೆಳೆಯ ಹಾಗೂ ಮಲೆಯಾಳಂ ಭಾಷೆಯ ಖ್ಯಾತ ಕವಿ ಹಾಗೂ ಅನುವಾದಕ ಡಾ.ಎ.ಜೆ. ಥಾಮಸ್ ಅವರು ತಮ್ಮ ಸುದೀರ್ಘ ಒಡನಾಟ ಮತ್ತು ಕಾವ್ಯಲೋಕದ ಅನೇಕ ಘಟನೆಗಳನ್ನು ಹಂಚಿಕೊಂಡರು. ಮಲೆಯಾಳಂನ ಖ್ಯಾತ ಕವಿ ಅನ್ವರ್ ಅಲಿ ಅವರ 'ಮಳೆಕ್ಕಾಲಂ' ಕವಿತೆಯನ್ನು ತಾವು ಮತ್ತು ಶಿವಪ್ರಕಾಶ್ ಹುಚ್ಚರಂತೆ ರಾತ್ರಿಯಿಡೀ ಕುಳಿತು ಅನುವಾದಿಸಿದ್ದು, ಇದಲ್ಲದೇ ಅನೇಕ ಮಲೆಯಾಳಿ ಕವಿತೆಗಳನ್ನು ಶಿವಪ್ರಕಾಶ್ ಥಾಮಸ್ ಅವರ ಮಾರ್ಗದರ್ಶನದಲ್ಲಿ ಅನುವಾದಿಸಿದ್ದು, ಮೊದಲಾದ ಆಪ್ತ, ಆತ್ಮೀಯ ಅನುಭವವನ್ನು ಹಂಚಿಕೊಂಡರು. ಎಚ್.ಎಸ್. ಶಿವಪ್ರಕಾಶ್ ಅವರ ಸಾಹಿತ್ಯ, ಕಾವ್ಯ ಮತ್ತು ನಾಟಕಗಳ ಪ್ರಭಾವ ಮಲೆಯಾಳಿ ಸಾಹಿತ್ಯ ಹಾಗೂ ರಂಗಕ್ಷೇತ್ರದಲ್ಲಿ ದಟ್ಟವಾಗಿದ್ದುದನ್ನು ಕಾಣಬಹುದು. ಶಿವಪ್ರಕಾಶ್ ಕೇರಳದಲ್ಲಿಯೂ ಅನೇಕ ರಂಗ ಶಿಬಿರ ಹಾಗೂ ಉಪನ್ಯಾಸಗಳನ್ನು ನೀಡಿದ್ದಾರೆ. ಅವರ ಅನೇಕ ನಾಟಕಗಳು, ಕೃತಿಗಳು ಮಲೆಯಾಳಂ ನಲ್ಲಿ ಅನುವಾದಿತಗೊಂಡಿವೆ ಎಂದು ನೆನೆಯುತ್ತ ಹೆಮ್ಮೆ ವ್ಯಕ್ತಪಡಿಸಿದರು. ಸಾಹಿತ್ಯ ಅಕಾಡೆಮಿ ಹೊರತರುತ್ತಿದ್ದ 'ಇಂಡಿಯನ್ ಲಿಟರೇಚರ್'ನ ಸಂಪಾದಕರಾಗಿ ಎಚ್.ಎಸ್. ಶಿವಪ್ರಕಾಶ್ ಹಾಗೂ ಡಾ. ಥಾಮಸ್ ಸಹ ಸಂಪಾದಕರಾಗಿ, ನಾಲ್ಕು ವರ್ಷಗಳ ಕಾಲ ಈ ಇಬ್ಬರು ಅನನ್ಯ ಲೇಖಕರ ನೇತೃತ್ವದಲ್ಲಿ ಇಂಡಿಯನ್ ಲಿಟರೇಚರ್ ನಂಥ ಪ್ರತಿಷ್ಠಿತ ಪತ್ರಿಕೆ ಯಶಸ್ವಿಯಾಗಿ ಮೂಡಿಬಂದ ಬಗೆ ಭಾರತೀಯ ಸಾಹಿತ್ಯದ ಇತಿಹಾಸದಲ್ಲೇ ಸುವರ್ಣಕಾಲವೆನ್ನಬಹುದು.

ಕನ್ನಡದ ಯುವಕವಿ ಆರಿಫ್ ರಾಜಾ ಮಾತನಾಡುತ್ತ "ಒಂದು ಭಾಷೆಯಲ್ಲಿ ತನಗರಿವಿಲ್ಲದೇ ತನ್ನ ಬರಹಗಳಿಂದ ನೂರಾರು ಲೇಖಕರನ್ನು ಹುಟ್ಟುಹಾಕಬಲ್ಲವನೇ ದೊಡ್ಡ ಲೇಖಕ. ಕುವೆಂಪು, ಅಡಿಗ ಮತ್ತು ಲಂಕೇಶರ ನಂತರ ಕನ್ನಡ ಸಾಹಿತ್ಯ ಲೋಕದಲ್ಲಿ ಈ ಮಾತು ಶಿವಪ್ರಕಾಶರಿಗೆ ಹೆಚ್ಚು ಅನ್ವಯಿಸುತ್ತದೆ. ಕನ್ನಡ ಕಾವ್ಯದ ಕಳೆದ ಮೂರು ದಶಕಗಳು ಶಿವಪ್ರಕಾಶ್ ಮತ್ತು ಸಿದ್ದಲಿಂಗಯ್ಯ ಯುಗವೆಂದೇ ಕರೆಯಬಹುದು. ನನ್ನ ಪ್ರಕಾರ ಹೊಲೆಮಾದಿಗರ ಹಾಡು, ಮಳೆಬಿದ್ದ ನೆಲದಲ್ಲಿ ಕಾವ್ಯ ಸಂಗ್ರಹಗಳು ಸರಿಸುಮಾರು ಮೂರು ದಶಕಗಳ ಕನ್ನಡ ಕಾವ್ಯದ ಗತಿ ಹಾಗು ದಿಕ್ಕನ್ನು ನಿರ್ದೇಶಿಸಿದ ಸೃಜನಶೀಲ ಸಂವತ್ಸರಗಳು" ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಡಾ.ಪುರುಷೋತ್ತಮ ಬಿಳಿಮಲೆ ಅವರು ಶಿವಪ್ರಕಾಶ್ ಅವರ ಇತ್ತೀಚಿನ ಸಮಗ್ರ ಕವಿತೆಗಳ ಸಂಗ್ರಹದಿಂದ 1988 ರಲ್ಲಿ ಪ್ರಕಟವಾದ 'ಅಣುಕ್ಷಣ ಚರಿತೆ' ಕವನ ಸಂಕಲನದ 'ನೀನಿಲ್ಲದಿದ್ದರೇ....' ಎಂಬ ಕವಿತೆಯನ್ನು ವಾಚಿಸಿದರು.

ಕಾರ್ಯಕ್ರಮದ ವಿಶೇಷ ಅಹ್ವಾನಿತ ಅತಿಥಿಗಳಾದ ಬಂಗಾಲಿ ಲೇಖಕ ದಿಲೀಪ್

## ಕಿರು ಸಂದರ್ಶನ

**ಅಭಿಮತ :** ನಿಮ್ಮ ದಶಕಕ್ಕೂ ಮೀರಿದ ದೆಹಲಿ ಇರವು ನಿಮ್ಮ ಕಾವ್ಯದ ಕನ್ನಡ ಕಸು
ಹೇಗೆ ಭಾಷೆಯ ಒಳಗಣ ಸ್ವಚ್ಛಂದತೆಯನ್ನು ಕಾಪಾಡಿಕೊಂಡಿರಿ?

**ಎಚ್.ಎಸ್.ಎಸ್ :** ನಾನು ದೆಹಲಿಗೆ ಬರುವಷ್ಟರೊಳಗೆ ನನ್ನ ಕಾವ್ಯದ ಭಾಷೆ ರೂಪುಗೆ
ಸಹಜವಾಗಿತ್ತು. ಆದ್ದರಿಂದ ಭಾಷೆಯನ್ನು ಕಾಪಾಡಿಕೊಳ್ಳುವುದು ಅಷ್ಟು ಕಷ್ಟವಾಗಲಿಲ್ಲ.
ಅವಕಾಶಗಳು ಕಮ್ಮಿಯಾದವು. ಈ ಬಗ್ಗೆ ನಾನು ವಿಶೇಷ ಗಮನ ಕೊಡಬೇಕಾಯಿತು.
ಕೊಂಡಿದ್ದೇನೆ. ಹಾಗೆ ಹೋದಾಗ ಆಡುಭಾಷೆಯನ್ನು ಮೈಯೆಲ್ಲಾ ಕಿವಿಯಾಗಿ ಕೇಳಿಸಿಕೆ
ಹುಡುಕಿಕೊಳ್ಳಬೇಕು.

**ಅಭಿಮತ :** ನಾಡಿನಿಂದ ದೂರ ಬಹುದೂರ ಇರುವ ನೀವು ನಿಮ್ಮ ಹಿತಚಿಂತಕರು,
ಬೀರಿತೆ?

**ಎಚ್.ಎಸ್.ಎಸ್ :** ಹಾಗೇನಿಲ್ಲ. ಎಲ್ಲದರಿಂದ ಮುಕ್ತನಾಗಿ ನಿರುಮ್ಮಳವಾಗಿ ಕವಿತೆ

**ಅಭಿಮತ :** ಈ ದೆಹಲಿ, ಬಹುಶಃ ಈಗ ನಿಮ್ಮ ಪ್ರಜ್ಞೆಯ ಅವಿಭಾಜ್ಯ ಅಂಗ
ನಿಮಗೇನನ್ನಿಸುತ್ತೆ?

**ಎಚ್.ಎಸ್.ಎಸ್ :** ದೆಹಲಿಯ ಪ್ರಭಾವವಿರುವುದು ನಿಜ. ಆದರೆ ಅವಿಭಾಜ್ಯ ಅ
ಜಾಗವೂ ಅದಕ್ಕಿಂತ ಅವಿಭಾಜ್ಯವಾಗಲು ಸಾಧ್ಯವಿಲ್ಲ.

**ಅಭಿಮತ :** ದೆಹಲಿ ಕರ್ನಾಟಕ ಸಂಘ ನಾಡಿನಿಂದ ವಲಸೆ ಬಂದಿರುವ ಕನ್ನಡ ಸಮುದ
ನಿಮ್ಮ ಸಲಹೆ–

**ಎಚ್.ಎಸ್.ಎಸ್ :** ಕನ್ನಡದ, ಕನ್ನಡಿಗರ ಇತ್ಯಾತ್ಮಕ ಸಾಧನೆಗಳ ಬಗ್ಗೆ ಅರಿವು ಮೂ
ಮಕ್ಕಳನ್ನು, ಮುಂದಿನ ಪೀಳಿಗೆಯವರನ್ನು ಹೇಗೆ ಒಳಗೊಳ್ಳುವುದು? ಇದು ಆಲೋಚಿಸ
ಮಕ್ಕಳಿರುವ ಕನ್ನಡಿಗರ ಎರಡು ಮೂರು ಕುಟುಂಬಗಳು ಆಗಾಗ ಆಸುಪಾಸಿನ ಜಾಗ
ಅದು ಸ್ವಲ್ಪ ಮಟ್ಟಿಗೆ ಸಹಾಯ ಮಾಡಬಹುದು. ವರ್ಷಕ್ಕೊಂದೆರಡು ಸಲ ತಜ್ಞರನ್ನು

**ಅಭಿಮತ :** ಈಗ ಮತ್ತಷ್ಟು ದೂರದ ಬರ್ಲಿನ್ ನಗರಕ್ಕೆ ತೆರಳುತ್ತಿದ್ದೀರಿ. ದೇಶದಿಂದ

**ಎಚ್.ಎಸ್.ಎಸ್ :** ಅಡಿಗರು ಹೇಳಿದಂತೆ, "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ
ಅದರ ರಿಹರ್ಸಲ್ಲನ್ನು ಇನ್ನೊಂದು ಸಾರಿ ಮಾಡುತ್ತಿದ್ದೇನೆ.

# – ಎಚ್.ಎಸ್. ಶಿವಪ್ರಕಾಶ್ ಅವರಿಗೆ ಅಭಿನಂದನೆ

ಬಸು, ಮಲೆಯಾಳಿ ಖ್ಯಾತ ಕವಿ ಡಾ.ಎ.ಜೆ. ಥಾಮಸ್ ಹಾಗೂ ಪ್ರೊ.ಎಚ್.ಎಸ್. ಶಿವಪ್ರಕಾಶ್ ಅವರನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಹೂಗುಚ್ಛ ನೀಡಿ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷ ಬಿ.ಕೆ. ಬಸವರಾಜು ಶಿವರಾಜ್ ಬೆಟ್ಟದೂರು ಅವರಿಗೆ ಹಾಗೂ ಸಹ ಕಾರ್ಯದರ್ಶಿ ರೇಣುಕಾ ನಿಡಗುಂದಿ ಕನ್ನಡದ ಯುವಕವಿ ಆರಿಫ್ ರಾಜಾ ಅವರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು. ದೆಹಲಿಯ ಹಿರಿಯ ಕನ್ನಡಿಗ, ಮಾಜಿ ಅಧ್ಯಕ್ಷ ಐ. ರಾಮಮೋಹನ್ ರಾವ್ ಅವರು ಶಿವಪ್ರಕಾಶ್ ಅವರಿಗೆ ಶಾಲು ಹೊದಿಸಿ ಅಭಿನಂದಿಸಿದರು. ಇದೊಂದು ಸುಯೋಗವೆಂಬಂತೆ ದೆಹಲಿಗೆ ಆಗಮಿಸಿದ್ದ ಹಿರಿಯ ಕನ್ನಡಿಗ ಹಾಗೂ ಮಾಜಿ ಅಧ್ಯಕ್ಷರಾದ ಸಿ.ವಿ. ಗೋಪಿನಾಥ್ ಅವರು ಫಲಬುಟ್ಟಿ ನೀಡಿ ಆಶೀರ್ವಚನದ ಮಂತ್ರಗಳಿಂದ ಶುಭಹಾರೈಸಿದರು. ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಉಪಾಧ್ಯಕ್ಷ ಚೆನ್ನು ಎಸ್. ಮಠದ ಹಾಗೂ ಶರಾವತಿ ಕನ್ನಡ ಸಂಘದಿಂದ ಜೆ.ಎನ್.ಯು.ನ ಪ್ರಾಧ್ಯಾಪಕ ಡಾ. ಎಚ್.ಎಸ್. ಪ್ರಭಾಕರ್ ಅವರು ಶಿವಪ್ರಕಾಶ್ ಅವರಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.



ಕರ್ನಾಟಕದಿಂದ ತಮ್ಮ ಯುಜಿಸಿ ಕಾರ್ಯ ನಿಮಿತ್ತ ಆಗಮಿಸಿದ್ದ ವಿದ್ವಾಂಸರುಗಳಾದ ಪ್ರೊ.ವಿ.ಜಿ. ಪೂಜಾರ್–(ಗುಲ್ಬರ್ಗಾ ವಿ.ವಿ), ಪ್ರೊ. ಶ್ರೀಕೃಷ್ಣ ಭಟ್ (ಕಲ್ಲಿಕೋಟೆ ವಿ.ವಿ), ಪ್ರೊ.ಸಿ.ಪಿ. ಸಿದ್ಧಾಶ್ರಮ (ಮೈಸೂರು ವಿ.ವಿ), ಪ್ರೊ. ಬಸವರಾಜ ಕಲ್ಗುಡಿ (ಬೆಂಗಳೂರು ವಿ.ವಿ) ಹಾಗೂ ಎ.ವಿ. ನಾವಡ (ಕನ್ನಡ ವಿ.ವಿ. ನಿವೃತ್ತ ಪ್ರಾಧ್ಯಾಪಕ) ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಶೇಷ ಮೆರುಗು ತಂದರು. ಶಿವಪ್ರಕಾಶ್ ಅವರ ಗೆಳೆಯ ಬಸವರಾಜ್ ಕಲ್ಗುಡಿಯವರು ಮಾತನಾಡುತ್ತಾ–"ಅಡಿಗರ ನಂತರದ ತಲೆಮಾರು ಶಿವಪ್ರಕಾಶರ ಯುಗ. ಅಡಿಗರ ನಂತರ ಮೂರು ದಶಕಗಳಲಿ 'ಮಿಲರೇಪ', 'ಮಳೆಬಿದ್ದ ನೆಲದಲ್ಲಿ' ಕವನ ಸಂಕಲನದ ಮೂಲಕ ಕನ್ನಡ ಕಾವ್ಯದ ಗತಿಯನ್ನೇ ಬದಲಾಯಿಸಿದ ಕವಿ. ಕನ್ನಡ ಕಾವ್ಯ ಸನ್ನಿವೇಶದ ಸ್ಥಿತಿಗೆ ಹೊಸ ಆಯಾಮವನ್ನು ನೀಡಿದ ಶಿವಪ್ರಕಾಶ್ ಕಾವ್ಯಾಂತರಂಗದ ಜಂಗಮ ಪ್ರಜ್ಞೆಯ ಕವಿ. ಅವರು ತಮ್ಮ ನಿರಂತರ ಕಾವ್ಯಾನ್ವೇಷಣೆ ಮೂಲಕ ಸೂಫಿ ಸಂತರು, ವಚನಕಾರರನ್ನು, ಉರ್ದು ಶಾಯರೀ, ಹಾಯಿಕು, ಬೌದ್ಧ ಪಂಥ ಮುಂತಾದ ಸಾಂಸ್ಕೃತಿಕ ವಿನ್ಯಾಸಗಳನ್ನು ನಿರ್ಮಿಸಿ ಸೃಜನಶೀಲತೆಯ ಸಂವಾದದ ಬೆಳಕು ನೀಡಿದ ವಿಶಿಷ್ಠ ಕವಿ. ಈಗ ಅವರು ಬರ್ಲಿನ್ ಕೇಂದ್ರ ನಿರ್ದೇಶಕರಾದದ್ದು ಕರ್ನಾಟಕಕ್ಕೆ ಸಂದ ಗೌರವ' ಎಂದು ಅಭಿನಂದಿಸಿದರು.

**ಪುಸ್ತಕ ಬಿಡುಗಡೆ :** ಈ ಸಂದರ್ಭದಲ್ಲಿ ತಮ್ಮ ಮೊದಲ ಕೃತಿ ಬಿಡುಗಡೆಯನ್ನು ಪ್ರೊ. ಶಿವಪ್ರಕಾಶ್ ಅವರಿಂದಲೇ ನೆರವೇರಿಸಬೇಕೆಂಬ ಹಂಬಲದಿಂದ ರಾಯಚೂರಿನಿಂದ ಆಗಮಿಸಿದ್ದ ಯುವ ಕವಿ ಶಿವರಾಜ್ ಬೆಟ್ಟದೂರು ಅವರ 'ಈ ಲೋಕದ ಇನ್ನೊಂದು ಗಿಡ' ಕವನ ಸಂಕಲನವನ್ನು ಶಿವಪ್ರಕಾಶ್ ಅವರು ಲೋಕಾರ್ಪಣ ಮಾಡಿದರು. ದೆಹಲಿ ವಿಶ್ವವಿದ್ಯಾಲಯದ ಕಮಲಾ ನೆಹರೂ ಕಾಲೇಜಿನಲ್ಲಿ ಪತ್ರಿಕೋದ್ಯಮ ಕಲಿಸುತ್ತಿರುವ ರಮೇಶ ಅರೋಲಿ ಅವರು ಕೃತಿಯ ಬಗ್ಗೆ ಮಾತನಾಡಿದರು. "ಕನ್ನಡವೂ ಸೇರಿದಂತೆ ಭಾರತೀಯ ಇತರೆ ಭಾಷೆಗಳಲ್ಲಿ ತಾಯಿ ಕುರಿತು ಬರೆದ ನೂರಾರು ಕವಿತೆಗಳು ಇವೆ. ಆದರೆ ತಾಯಿಯೆದೆಗಿನ ಮಮತೆಯಷ್ಟೇ ತಂದೆ ಕುರಿತು ಬಂದ ಕವಿತೆಗಳು ತುಂಬಾ ವಿರಳ. ಹೀಗಾಗಿ ಶಿವರಾಜ ಬೆಟ್ಟದೂರರ "ಈ ಲೋಕದ ಇನ್ನೊಂದು ಗಿಡ" ಅಂತಹ ಸಂಕೀರ್ಣ ಸಂಬಂಧಗಳನ್ನು ತುಂಬಾ ಮಾರ್ಮಿಕವಾಗಿ ಕಟ್ಟಿಕೊಡಬಲ್ಲ ಸಂಕಲನವಾಗಿದೆ. ದೋ–ಆಬ್ ಪ್ರದೇಶವೆಂದು ಕರೆಯಲ್ಪಡುವ ರಾಯಚೂರು ನೆಲದ ನುಡಿಗಟ್ಟನ್ನು ಯಶಸ್ವಿಯಾಗಿ ಬಳಸುವ ಇವರು ಪರಿಸರದೊಂದಿಗಿನ ಮನುಷ್ಯ ಸಂಬಂಧವನ್ನು ವಿಶ್ಲೇಷಿಸುವಾಗ ಎಲ್ಲೂ ರಮ್ಯತೆ ಮೆರೆಯುವುದಿಲ್ಲ. ಮೇಲ್ನೋಟಕ್ಕೆ ನವೋದಯ ಪ್ರಕಾರವನ್ನು ಪ್ರತಿನಿಧಿಸುವಂತೆ ಕಾಣುವ ಇಲ್ಲಿನ ಕವಿತೆಗಳು ಅದರ ವಿಸ್ತಾರಕ್ಕೆ ಸಾಕ್ಷಿಯಾಗಿವೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಶಿವರಾಜ ಬೆಟ್ಟದೂರು ಅವರು ತಮ್ಮ ಕವನ ಸಂಕಲನದ ಕೆಲವು ಕವನಗಳನ್ನು ವಾಚಿಸಿ ಕೃತಿ ಬಿಡುಗಡೆ ಮಾಡಲು ಅವಕಾಶ ನೀಡಿದ ಕರ್ನಾಟಕ ಸಂಘಕ್ಕೆ ಹಾಗೂ ಶಿವಪ್ರಕಾಶ್ ಅವರಿಗೆ ಧನ್ಯವಾದ ಸಮರ್ಪಿಸಿದರು.

ಆನಂತರ ಅಭಿನಂದನೆ ಸ್ವೀಕರಿಸಿದ ಪ್ರೊ.ಎಚ್.ಎಸ್. ಶಿವಪ್ರಕಾಶ್ ಅವರು ತಮ್ಮ ದಶಕಕ್ಕೂ ಮೀರಿದ ದೆಹಲಿ ವಾಸದಲ್ಲಿ ನೆರವಾದ, ಪ್ರೀತಿ ಆತ್ಮೀಯತೆಯನ್ನು ನೀಡಿ ಬದುಕಿಗೆ ಬೆಳಕು ನೀಡಿದ ಅನೇಕ ಕನ್ನಡ ಸಹೃದಯರನ್ನು ನೆನೆದು ಅವರಿಗೆ ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಕೊನೆಯಲ್ಲಿ ಡಾ. ವೆಂಕಟಾಚಲ ಹೆಗಡೆಯವರು ಜವಾಹರ ನೆಹರೂ ವಿಶ್ವವಿದ್ಯಾಲಯದ ತಮ್ಮ ವೃತ್ತಿ, ವಾಸ್ತವ್ಯ, ಒಡನಾಟಗಳನ್ನು ನೆನೆಯುತ್ತ ಮತ್ತೊಮ್ಮೆ ಸಹೋದ್ಯೋಗಿ ಶಿವಪ್ರಕಾಶ್ ಅವರನ್ನು ಅಭಿನಂದಿಸುತ್ತ ವಂದಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಕಾರ್ಯಕ್ರಮ ನಿರ್ವಹಿಸಿದರು.

❑ ರೇಣುಕಾ ನಿಡಗುಂದಿ

---

ವನ್ನು ಮಿತಿಗೊಳಿಸಿತೆ? ಭಾಷೆಯೊಡನೆ ನಿತ್ಯ ಒಡನಾಟದ ಗೈರು ಹಾಜರಿಯಲ್ಲಿ ನೀವು

ೂಂಡಿತ್ತು. ದಶಕಗಳ ತಾಲೀಮಿನ ಪರಿಣಾಮದಿಂದ ಅದು ನನಗಾಗಲೇ ಉಸಿರಾಟದಷ್ಟು
ಆದರೆ ಇಲ್ಲಿ ಬಂದ ಮೇಲೆ ಆಡುಮಾತಿನ ಸೂಕ್ಷ್ಮ ಬದಲಾವಣೆಗಳನ್ನು ಗಮನಿಸುವ
ಆದ್ದರಿಂದ ತಿಂಗಳಿಗೊಮ್ಮೆಯಾದರೂ ಕರ್ನಾಟಕಕ್ಕೆ ಹೋಗಿಬರುವ ಪರಿಪಾಠವನ್ನಿಟ್ಟು
ೂಳ್ಳುತ್ತೇನೆ. ಬರ್ಲಿನ್‌ಗೆ ಹೋದ ಮೇಲೆ ಇದು ಸಾಧ್ಯವಿಲ್ಲ. ಇನ್ನಾವುದಾದರೂ ದಾರಿ

ಹಿತ ಶತ್ರುಗಳಿಂದ ವಂಚಿತರಾದಿರಿ. ಇದು ನಿಮ್ಮ ಸೃಜನಶೀಲತೆಯ ಮೇಲೆ ಪರಿಣಾಮ

ುರೆಯುವ ಅವಕಾಶ ಸಿಕ್ಕಿತು. ದೆಹಲಿ, ನಿನಗೆ ಧನ್ಯವಾದಗಳು.
ಾಗಿರಬಹುದು. ಈ ದೆಹಲಿ ಇಲ್ಲಿನ ಸಂಸ್ಕೃತಿ, ವಿಕೃತಿ, ಜನ, ಪರಿಸರಗಳ ಬಗ್ಗೆ

ನ್ನುವ ಮಟ್ಟಿಗಲ್ಲ. ಏಕೆಂದರೆ ಕರ್ನಾಟಕ ನನ್ನೊಳಗೆ ಗಟ್ಟಿಯಾಗಿ ಕೂತಿದೆ. ಯಾವ

ಾಯದಲ್ಲಿ ಕನ್ನಡತನವನ್ನು ಕಾಪಾಡಿಕೊಳ್ಳಲು ಹಮ್ಮಿಕೊಳ್ಳಬೇಕಾದ ಯೋಜನೆಗಳೇನು?

ಡಿಸುವ ಕಾರ್ಯಕ್ರಮಗಳನ್ನು ಈಗಾಗಲೇ ಮಾಡುತ್ತಿದ್ದೀರ. ಅಭಿನಂದನೆಗಳು. ಆದರೆ
ೀಕಾದ ಪ್ರಶ್ನೆ. ಮುಂದಿನ ತಲೆಮಾರುಗಳು ಕನ್ನಡದಿಂದ ದೂರವಾಗುತ್ತಿದ್ದಾರೆ. ಬಹುಶಃ
ಳಿಗೆ ಆಗಾಗಿ ಹೋಗಿ, ಒಂದೆರೆಡು ದಿನ ತಂಗಿ, ಒಡನಾಟ ಮಾಡಿಕೊಂಡು ಬಂದರೆ,
ರೆಸಿ ಕನ್ನಡ ಪ್ರಜ್ಞಾಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದೇನೋ.
ದೂರ, ನಾಡಿನಿಂದ ಬಹುದೂರ, ಕನ್ನಡದಿಂದಂತೂ ಅತಿ ದೂರ! ನಿಮ್ಮ ಅನಿಸಿಕೆ–
ತುಡಿವುದೇ ಜೀವನ". ಎಲ್ಲ ಕಡೆಗಳಿಂದಲೂ ಕೊನೆಗೊಂದು ಸಲ ತೆರಳಲೇಬೇಕಲ್ಲ.

❑ ಉಷಾ ಭರತಾದ್ರಿ

# ಕರ್ನಾಟಕ ಬ್ಯಾಂಕಿನ ಉಪ ಮಹಾ ಪ್ರಭಂದಕ ಶ್ರೀ ರಾಘವೇಂದ್ರ ಅವರಿಗೆ ಆತ್ಮೀಯ ಬೀಳ್ಕೊಡುಗೆ




ವೃತ್ತಿಯ ಸಲುವಾಗಿ ರಾಷ್ಟ್ರದ ರಾಜಧಾನಿಗೆ ಕನ್ನಡ ಅಧಿಕಾರಿಗಳು ಬರುತ್ತಿರುತ್ತಾರೆ ಹಾಗೂ ತಮ್ಮ ಸೇವಾವಧಿ ಮುಗಿಸಿ ವರ್ಗಾವಣೆಯಾಗಿ ತೆರಳುತ್ತಾರೆ. ಹೀಗೆ ಬಂದವರಲ್ಲಿ ಅನೇಕರು ಬಂದದ್ದೂ ತಿಳಿಯುವುದಿಲ್ಲ, ಹೋದದ್ದೂ ತಿಳಿಯುವುದೇ ಇಲ್ಲ. ಆದರೆ ಕನ್ನಡನಾಡು, ನುಡಿ, ಸಂಸ್ಕೃತಿಯ ಅಭಿಮಾನಿಗಳು ತಮ್ಮ ಕಾರ್ಯಾವಧಿಯಲ್ಲಿ ತಾಯ್ನುಡಿಗಾಗಿ ತಮ್ಮ ಸಹಾಯ ಹಸ್ತವನ್ನು ಚಾಚಿ ಅವಿಸ್ಮರಣೀಯರಾಗುತ್ತಾರೆ. ಈ ಗುಂಪಿನಲ್ಲಿ ಗುರುತಿಸಲ್ಪಡುವವರಲ್ಲಿ ಕರ್ನಾಟಕ ಬ್ಯಾಂಕಿನ ಉಪಮಹಾ ಪ್ರಭಂದಕ ಶ್ರೀ ರಾಘವೇಂದ್ರ ಭಟ್ ಅವರೂ ಒಬ್ಬರು. ಒಂದು ವರ್ಷದ ಹಿಂದೆ ದೆಹಲಿಗೆ ಆಗಮಿಸಿದ್ದ ರಾಘವೇಂದ್ರ ಭಟ್ ಅವರು ಈ ಹಿಂದೆ ಕೂಡಾ ಎರಡು ಬಾರಿ ದೆಹಲಿಯಲ್ಲಿ ಸೇವೆ ಸಲ್ಲಿಸಿದ್ದರು. ಬೆಂಗಳೂರಿಗೆ ವರ್ಗಾವಣೆಯಾಗಿ ತೆರಳುತ್ತಿದ್ದ ರಾಘವೇಂದ್ರ ಭಟ್ ಅವರನ್ನು ಮೇ 13, 2011ರಂದು ಸಂಜೆ ದೆಹಲಿ ಕರ್ನಾಟಕ ಸಂಘದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದ ಸಮಯದಲ್ಲಿ ತಮ್ಮ ಅತ್ಯಮೂಲ್ಯ ಸಲಹೆ–ಸಹಕಾರಗಳಿಂದ ಸಂಘಕ್ಕೆ ಕೋಟ್ಯಂತರ ರೂಪಾಯಿಗಳ ಸಾಲ ದೊರಕಿಸಿ ಕೊಡುವಲ್ಲಿ ಅಪಾರ ಸಹಾಯ ಮಾಡಿದ್ದಾರೆ ಎಂದು ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಅಭಿಪ್ರಾಯಪಟ್ಟರು. ಸಂಘದ ಚರಿತ್ರೆಯ ಪುಟಗಳನ್ನು ತಿರುವುತ್ತಾ, ಕಟ್ಟಡ ನಿರ್ಮಾಣ ಹಂತದಲ್ಲಿದ್ದಾಗ ಒಮ್ಮೆ ರಾತ್ರಿ 12 ಗಂಟೆ ಸಮಯಕ್ಕೆ ಸಂಘಕ್ಕೆ ಬಂದಿದ್ದಾಗ ಅಂದಿನ ಕಾರ್ಯದರ್ಶಿ ಶ್ರೀ ಕೃಷ್ಣಭಟ್ ಹಾಗೂ ರಾಘವೇಂದ್ರ ಭಟ್ ಅವರು ಸಂಘಕ್ಕೆ ತುರ್ತಾಗಿ ಬೇಕಾಗಿದ್ದ ಸಾಲಕ್ಕಾಗಿ ಪ್ರಾಜೆಕ್ಟ್ ರಿಪೋರ್ಟ್ ಸಲ್ಲಿಸಲು ಬೇಕಾದ ಎಲ್ಲ ಅಗತ್ಯ ದಾಖಲೆಗಳ ತಯಾರಿಯಲ್ಲಿ ನಿರತರಾಗಿದ್ದರು ಎಂದು ಸ್ಮರಿಸುತ್ತಾ ಬಿಳಿಮಲೆ ಅವರು ರಾಘವೇಂದ್ರ ಭಟ್ ಅವರಿಗೆ ವಂದಿಸಿದರು.

ದೆಹಲಿ ಹಿರಿಯ ಕನ್ನಡಿಗ, ಸಂಘದ ಮಾಜಿ ಅಧ್ಯಕ್ಷ ಐ. ರಾಮಮೋಹನ ರಾವ್ ಅವರು ರಾಘವೇಂದ್ರ ಭಟ್ ಅವರಂತಹ ಅಧಿಕಾರಿಗಳು ಅಭಿನಂದನಾರ್ಹರು ಹಾಗೂ ಅವರ ಸೇವೆ ಅವಿಸ್ಮರಣೀಯ ಎಂದು ಪ್ರಶಂಸನೀಯ ಮಾತುಗಳನ್ನಾಡಿದರು. 1942ರಲ್ಲಿ ಸ್ಥಾಪನೆಯಾದ ಮೊಟ್ಟಮೊದಲ ಬ್ಯಾಂಕ್ ಕರ್ನಾಟಕ ಬ್ಯಾಂಕ್ ಇಂದು ರಾಷ್ಟ್ರಮಟ್ಟದಲ್ಲಿ ಬೆಳೆಯುವುದರಲ್ಲಿ ರಾಘವೇಂದ್ರ ಭಟ್, ಮಹಾಬಲೇಶ್ವರ ಭಟ್ ಮೊದಲಾದ ಅಧಿಕಾರಿಗಳ ಕೊಡುಗೆಯನ್ನು ನೆನೆದರು.

ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣಕ್ಕಾಗಿ ಸಾಲ ನೀಡುವುದರ ಜೊತೆಗೆ ಸಂಘದ ಮುಖಪತ್ರಿಕೆ "ಅಭಿಮತ"ಕ್ಕೆ ನಿರಂತರ ಜಾಹೀರಾತು ನೀಡಿ ಪ್ರೋತ್ಸಾಹಿಸುತ್ತಿರುವ ಕರ್ನಾಟಕ ಬ್ಯಾಂಕಿನ ಅಧಿಕಾರಿಗಳಿಗೆ ಪ್ರಧಾನ ಸಂಪಾದಕಿ ಹಾಗೂ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಮನದಾಳದ ಧನ್ಯವಾದಗಳನ್ನು ಸಲ್ಲಿಸುತ್ತಾ ರಾಘವೇಂದ್ರ ಭಟ್ ಅವರ ಉಜ್ವಲ ಭವಿಷ್ಯಕ್ಕಾಗಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಹಿರಿಯ ಕನ್ನಡಿಗ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಎನ್.ಜೆ. ಕಾಮತ್ ಅವರು ಭಟ್ಟರಿಗೆ ಆತ್ಮೀಯವಾಗಿ ಶುಭ ಹಾರೈಸಿದರು.

ಐ ರಾಮಮೋಹನ ರಾವ್ ಅವರು ರಾಘವೇಂದ್ರ ಭಟ್ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು, ಎನ್. ಜೆ. ಕಾಮತ್ ಅವರು ಫಲಬುಟ್ಟಿ ನೀಡಿದರು ಹಾಗೂ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಸಂಘದ ಸ್ಮರಣಿಕೆಯನ್ನು ಇತ್ತರು.

ಅಭಿನಂದನೆ ಸ್ವೀಕರಿಸಿದ ರಾಘವೇಂದ್ರ ಭಟ್ ಅವರು ಹೃದಯತುಂಬಿ ಮಾತನಾಡಿ, ಸಂಘಕ್ಕೆ, ಅದರ ಮೂಲಕ ಕನ್ನಡಕ್ಕಾಗಿ ನನ್ನ ಕಿಂಚಿತ್ ಸೇವೆ ಮಾಡಿದ್ದೇನೆ ಹಾಗೂ ಅದನ್ನು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ ಎಂದರು. "ದೆಹಲಿಗೆ ಬಂದ ಹೊಸತರಲ್ಲಿ ಸಂಘದ ಕ್ಯಾಂಟೀನ್‌ನಲ್ಲಿ ಊಟ–ತಿಂಡಿ ಮಾಡುತ್ತಾ ಸಂಘದ ವಸತಿಗೃಹದಲ್ಲೇ ತಂಗಿದ್ದರಿಂದ ನನಗೆ ಸಂಘವು ನನ್ನ ಮನೆಯೆಂದೇ ಅನಿಸುತ್ತದೆ, ಆದ್ದರಿಂದ ಸಂಘಕ್ಕೆ ಮಾಡಿದ ಕೆಲಸ ನನ್ನ ಮನೆಗೇ ಮಾಡಿದ ಸಹಾಯ" ಎಂದು ಅಭಿಪ್ರಾಯಪಟ್ಟರು. ದೆಹಲಿಯಂತಹ ಹೊರಜಾಗಕ್ಕೆ ಬಂದಾಗ ನಮ್ಮಲ್ಲಿರುವ ಕನ್ನಡತನ ಜಾಗ್ರತವಾಗುತ್ತದೆ. ಕರ್ನಾಟಕ ಬ್ಯಾಂಕ್, ಕರ್ನಾಟಕ ಸಂಘ, ಕರ್ನಾಟಕ ಫುಡ್ ಸೆಂಟರ್ ಹೀಗೆ 'ಕರ್ನಾಟಕ' ಎಂಬ ಹೆಸರೇ ನಮ್ಮೆಲ್ಲರನ್ನು ಒಂದುಗೂಡಿಸುವ ಸೆಳೆತ ಎಂದು ಮನದಾಳದಿಂದ ದೆಹಲಿ ಕರ್ನಾಟಕ ಸಂಘದ ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದ ಸಮರ್ಪಿಸಿದರು.

ಕೇವಲ ವ್ಯಾವಹಾರಿಕ ಸಂಬಂಧವಲ್ಲದೇ ಕನ್ನಡತನದ ಭಾವನಾತ್ಮಕ ಸಂಬಂಧವಿರುವ ಕರ್ನಾಟಕ ಬ್ಯಾಂಕಿನ ಸಹಾಯ ಹಸ್ತವನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ರಾಘವೇಂದ್ರ ಭಟ್ ಅವರಿಗೆ ಸಾಂಸ್ಕೃತಿಕ ಸಮುಚ್ಚಯಕ್ಕಾಗಿ ಶ್ರಮಿಸಿದ ಎಲ್ಲ ಕನ್ನಡಿಗರ ಪರವಾಗಿ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸಿದರು.

"ಕರ್ನಾಟಕ ಬ್ಯಾಂಕ್ ಹಾಗೂ ಕರ್ನಾಟಕ ಸಂಘದ ನಡುವಿನ ಬಾಂಧವ್ಯದ ಬೀಜಾಂಕುರ ಐ. ರಾಮಮೋಹನರಾವ್ ಅವರಿಂದಲೇ ಆದರೂ ಕಾರ್ಯಕಾರಿ ಮಟ್ಟದಲ್ಲಿ ಸಂಘದ ಜೊತೆ ಸಂಪರ್ಕ ಇರಿಸಿಕೊಂಡು ಈ ನಂಟನ್ನು ಬಲಪಡಿಸಿದವರಲ್ಲಿ ರಾಘವೇಂದ್ರ ಭಟ್ ಅವರು ಮೊದಲಿಗರು" ಎಂದು ನೆನೆಯುತ್ತಾ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದ ಹಂತದಲ್ಲಿ ರಾಘವೇಂದ್ರ ಭಟ್ ಅವರ ನೆರವನ್ನು ಸಮರ್ಥವಾಗಿ ಪಡೆದು ಕಾರ್ಯ ನಿರ್ವಹಿಸಿದ ಸಂಘದ ಮಾಜಿ ಕಾರ್ಯದರ್ಶಿ ಸರವು ಕೃಷ್ಣಭಟ್ ಅವರು ಅತ್ಯಂತ ಆಪ್ತವಾಗಿ ಕಾರ್ಯಕ್ರಮ ನಿರ್ವಹಿಸಿದರು.

ಸಂಘದ ಸದಸ್ಯರು, ಕಾರ್ಯಕಾರಿ ಸಮಿತಿಯವರು ಹಾಗೂ ಭಟ್ಟರ ಅನೇಕ ಹಿತೈಷಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಟ್ಟರನ್ನು ಪ್ರೀತಿಯಿಂದ ಬೀಳ್ಕೊಟ್ಟರು.

❑ ಟಿ.ಎಸ್. ರಮೇಶ್

## ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸರ್ವ ಸದಸ್ಯರ ಸಭೆ

ಮೇ 29ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸರ್ವ ಸದಸ್ಯರ ಸಭೆ ನಡೆಯಿತು. ಶಾಲೆಯ ಆಡಳಿತಾತ್ಮಕ ಕಾರ್ಯಕಲಾಪ, ಸುವರ್ಣ ಮಹೋತ್ಸವ ದಿನಾಚರಣೆ, ವಾರ್ಷಿಕ ಆಯ–ವ್ಯಯ ಮೊದಲಾದ ಗಹನವಾದ ವಿಚಾರಗಳನ್ನು ಕುರಿತಂತೆ ವಿಸ್ತೃತ ಚರ್ಚೆ ಮಾಡಲಾಯಿತು. ಸಭೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರ ಪ್ರಶ್ನೆಗಳಿಗೆ ವೇದಿಕೆಯಲ್ಲಿ ಉಪಸ್ಥಿತರಿದ್ದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಜಿ.ಎಂ. ಲಿಂಗರಾಜ್, ಕಾರ್ಯದರ್ಶಿ ಆಂಜನಿ ಗೌಡ, ಉಪಾಧ್ಯಕ್ಷರುಗಳಾದ ಈಶ್ವರ್ ಭಟ್, ಡಾ. ಅಹಲ್ಯಾ ಚಿಂತಾಮಣಿ ಹಾಗೂ ಖಜಾಂಚಿ ಬಸವರಾಜ ಎಸ್. ಮೇಟಿ ಅವರು ಸಮರ್ಪಕವಾದ ಉತ್ತರ ನೀಡಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ತೆರವಾಗಿದ್ದ ಒಂದು ಸದಸ್ಯ ಸ್ಥಾನಕ್ಕೆ ಚುನಾವಣೆ ನಡೆದು ದೆಹಲಿ ಕೊಡಗು ಸಮಾಜದ ಮಾಜಿ ಅಧ್ಯಕ್ಷ ಪಿ.ಎನ್. ಅಪ್ಪಯ್ಯ ಚುನಾಯಿತರಾದರು. ಅಪ್ಪಯ್ಯ ಅವರಿಗೆ ಹಾರ್ದಿಕ ಅಭಿನಂದನೆಗಳು.

2010–11ನೇ ಸಾಲಿನ 10ನೆಯ ತರಗತಿಯ ಫಲಿತಾಂಶ 95% ಬಂದಿದ್ದು, ಕಳೆದ ಬಾರಿಗಿಂತ ಇದು ಉತ್ತಮ ಫಲಿತಾಂಶವಾಗಿದೆ.

## ದಕ್ಷಿಣ ಭಾರತದ ಕರ್ನಾಟಕ, ಕೇರಳ ಹಾಗೂ ಕರಾವಳಿಯ
## ಸ್ವಾದಿಷ್ಟ ತಿನಿಸುಗಳಿಗೆ ಒಮ್ಮೆ ಭೇಟಿ ಕೊಡಿ

*Explore South indian cuisine in its true authentic style...*
*For non-vegetarians and vegetarians alike!*

FOR DETAILS CONTACT GAURAV - +91 8860080710
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ, ಜನಾರ್ದನ ಶೆಟ್ಟಿ – +91 9266833525

This season... Follow the Trail !

**Happy Hours**
**"50% off on IMFL"**
**3-8 pm**




**Home Delivery**
**Available**

spice water trail

AN ALCHEMIST GROUP VENTURE
visit us at
http://www.facebook.com/Spice-Water-Trail
M-24, GREATER KAILASH PART I, M BLOCK MARKET, NEW DELHI

# Saujanya Printing Press

**A HOUSE OF QUALITY PRINTING**

**C-95, Okhla Industrial Area, Phase-I,**
**New Delhi - 110 020**
**Phone : 26815778, 41611143**
**Mobile : 9811104398, 9811604398**
**e-mail : rvprintingpress@gmail.com / hpgp2006@gmail.com**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

ದೆಹಲಿ ಕರ್ನಾಟಕ ಸಂಘದ ಪತ್ರಿಕೆಯಾದ 'ಅಭಿಮತ'ವನ್ನು ನೋಡಿದೆ, ಓದಿದೆ, ನಲಿದೆ. ಪ್ರತಿ ಸಂಚಿಕೆಯನ್ನು ಓದಿದಾಗಲೂ ಮೆಚ್ಚಿ ಬರೆಯುವ ಮನಸ್ಸಾದರೂ ಕಾರ್ಯಗತೊತ್ತಡದಲ್ಲಿ ಸಾಧ್ಯವಾಗುತ್ತಿರಲಿಲ್ಲ. ಮೊದಲನೆಯದಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆ. ರಾಷ್ಟ್ರಕವಿ ಕುವೆಂಪು ಒಬ್ಬ ವಿಶ್ವಕವಿ, ಒಬ್ಬ ವಿಶ್ವಮಾನವ. ಅವರು ಎಲ್ಲ ಗೌರವಕ್ಕೆ ಪಾತ್ರರು. ಆ ಧನ್ಯ ಕವಿಯ ಸಾಹಿತ್ಯಲೋಕವನ್ನು ದೆಹಲಿ ಕನ್ನಡಿಗರಿಗೆ ಪರಿಚಯಿಸುವ ಸುತ್ತ್ಯ ಕಾರ್ಯವನ್ನು ಅರ್ಥಪೂರ್ಣವಾಗಿ ಸಂಘ ನೆರವೇರಿಸಿ ಕನ್ನಡಿಗರ, ಕೃತಜ್ಞತೆಗೆ ಪಾತ್ರವಾಗಿದೆ.

ಈ ತಿಂಗಳ 'ಅಭಿಮತ'ದಲ್ಲಿ ಮೂರು ದಿವಸಗಳ ಮಹತ್ವದ ಕಾರ್ಯಕ್ರಮದ ವರದಿಯನ್ನು ಓದಿ ಮರುಕಳಿಸಿದ ಆನಂದದಲ್ಲಿ ಮೈಮರೆತೆ. ಪ್ರಾರಂಭದಿಂದ ಅಂತ್ಯದವರೆಗೂ ನಡೆದ ಎಲ್ಲ ಕಾರ್ಯಕ್ರಮಗಳ ವರದಿ, ಸಣ್ಣ ಗಿಂಡಿಯಲ್ಲಿ ಬೃಹತ್ ಗೊಮ್ಮಟನಿಗೆ ಅಭಿಷೇಕ ಮಾಡಿದಂತ ವರದಿ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಆ ವರದಿ ಅತ್ಯಂತ ತುಷ್ಟವಾದ, ಅತಿ-ಮಿತಿಗಳಿಗೆ ಹೋಗದೆ ಸಮತೋಲನದ ವಿಶೇಷ ವರದಿ ಎಂದೇ ನಾನು ಭಾವಿಸಿದ್ದೇನೆ. ಆಯ್ಕೆ ಮಾಡಿರುವ ಭಾವಚಿತ್ರಗಳು ಕಾರ್ಯಕ್ರಮದ ಪರಿಪೂರ್ಣತೆಯನ್ನೂ ಅರ್ಥವಂತಿಕೆಯನ್ನೂ ಹೆಚ್ಚಿಸಿವೆ. ಎಲ್ಲರಿಗೂ ಮತ್ತೊಮ್ಮೆ ಅಭಿನಂದನೆ, ವಂದನೆ.

**ಕಮಲಾ ಹಂಪನಾ, ಬೆಂಗಳೂರು**

ಮೇ 2011ರ 'ಅಭಿಮತ' ಕಳಿಸಿದ್ದೀರಿ, ತಲುಪಿದೆ, ವಂದನೆಗಳು. ತಮ್ಮ ನೇತೃತ್ವದಲ್ಲಿ ಮೂರು ದಿವಸ ನಡೆದ ಕುವೆಂಪು ವಿಚಾರ ಸಂಕಿರಣದ ಸಮಗ್ರ ವರದಿ ಈ ಸಂಚಿಕೆಯಲ್ಲಿ ಸೊಗಸಾಗಿ ವರದಿಯಾಗಿದೆ. ಇದೊಂದು ಅಚ್ಚುಕಟ್ಟಾದ ದಾಖಲೆ. ಫೋಟೋಗಳ ಆಯ್ಕೆ ಯೋಗ್ಯವೂ ಪ್ರಾತಿನಿಧಿಕವೂ ಆಗಿದೆ. ಪ್ರಮುಖ ಉಪನ್ಯಾಸಕರ ಭಾಷಣವನ್ನು, ಅದರ ಸಾರ ಸೋರದಂತೆ, ಸಂಗ್ರಹಿಸಿರುವುದು ಶ್ಲಾಘನೀಯ. ತುಂಬ ಶ್ರದ್ಧೆ ಮತ್ತು ಪ್ರೇಮದಿಂದ ಈ ಕಾರ್ಯ ಮಾಡಿರುವ ಉಷಾ ಭರತಾದ್ರಿ ಮತ್ತು ರೇಣುಕಾ ನಿಡಗುಂದಿ ಅವರಿಗೆ ದಯವಿಟ್ಟು ನನ್ನ ಮೆಚ್ಚುಗೆ ಮತ್ತು ಸಂತೋಷ ತಿಳಿಸಿರಿ. ಸಂಘದ ಎಲ್ಲ ಪದಾಧಿಕಾರಿಗಳಿಗೆ ಅಭಿಮತದ ಸಂಪಾದಕ ಮಂಡಳಿಯವರಿಗೆ, ಪುರುಷೋತ್ತಮ ಬಿಳಿಮಲೆಗೆ, ಸಹಕರಿಸಿದ ಎಲ್ಲರಿಗೂ ನನ್ನ ಸಮಸ್ಕಾರ ತಿಳಿಸಿರಿ.

**ಹಂಪನಾ, ಬೆಂಗಳೂರು**

ಅಭಿಮತ ಪತ್ರಿಕೆ ತುಂಬ ಸುಂದರವಾಗಿ ಬರುತ್ತಿದೆ. ನಮ್ಮ ಮುಂಬಯಿ ಕರ್ನಾಟಕ ಸಂಘದ ಗ್ರಂಥಾಲಯಕ್ಕೆ ಅಭಿಮತ ಬರುತ್ತಿರುವುದರಿಂದ ನಿರಂತರ ಓದುತ್ತಿದ್ದೇನೆ. ಸಂಘದ ಸದಸ್ಯರ ನಡುವಿನ ಸಂಪರ್ಕ ಸೇತುವೆಯಾಗಿರುವುದರ ಜತೆಗೆ ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಪತ್ರಿಕೆ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಿರುವುದು ಅತ್ಯಂತ ಸ್ತುತ್ಯಾರ್ಹ. ಸಂಪಾದಕ ಮಂಡಳಿಯ ಈ ಸಾಂಸ್ಕೃತಿಕ ಜವಾಬ್ದಾರಿ ಮಹತ್ವದ ಸಂಗತಿಯಾಗಿದೆ. ದೇಶದ ರಾಜಧಾನಿಯಲ್ಲಿ ಕನ್ನಡದ ಕಂಪನ್ನು ಪಸರಿಸುತ್ತಾ ಕನ್ನಡಿಗರ ಅಸ್ಮಿತೆಯನ್ನು ಕಾಪಾಡಿಕೊಳ್ಳುವಲ್ಲಿ, ಕನ್ನಡದ ಮನಸ್ಸುಗಳನ್ನು ಬೆಸೆಯುವಲ್ಲಿ ದೆಹಲಿ ಕರ್ನಾಟಕ ಸಂಘದ ಕ್ರಿಯಾಶೀಲತೆ ಮಾದರಿಯಾಗಿದೆ. ಸಂಘವು ಆಯೋಜಿಸಿದ ಕವಿ, ನಾಟಕಕಾರ ಎಚ್.ಎಸ್. ಶಿವಪ್ರಕಾಶ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರಕಿತು. ಅಚ್ಚುಕಟ್ಟಾದ, ಆತ್ಮೀಯ ಸಮಾರಂಭವದು. ಅಭಿಮತ ಪತ್ರಿಕೆಯು ಉತ್ತಮ ಪುಟ ವಿನ್ಯಾಸ, ಮೌಲಿಕ ಬರಹಗಳನ್ನು ಆಯ್ಕೆ, ವರ್ಣಮುದ್ರಣದಿಂದ ಆಕರ್ಷಕವಾಗಿ ಮೂಡಿ ಬರುತ್ತಿದೆ. ಸಂಪಾದಕರ, ಸಂಪಾದಕ ಮಂಡಳಿಯ ಸಾಂಸ್ಕೃತಿಕ ಜವಾಬ್ದಾರಿ, ಬದ್ಧತೆ, ಶ್ರಮ ಶ್ಲಾಘನೀಯ. ಅಭಿನಂದನೆಗಳು.

**ಡಾ. ಭರತ್‌ಕುಮಾರ್ ಪೊಲಿಪು,**
**ಗೌರವ ಕಾರ್ಯದರ್ಶಿ, ಕರ್ನಾಟಕ ಸಂಘ, ಮುಂಬಯಿ**

### ಕುವೆಂಪು ವಿಚಾರ ಸಂಕಿರಣದ ಹೊರನೋಟ

ಏಪ್ರಿಲ್ 15,16, ಮತ್ತು 17ರಂದು ನಡೆದ "ಕುವೆಂಪು ವಿಚಾರ ಸಂಕಿರಣ"ದ ಒಂದು ಸಮಗ್ರ ಹೊರನೋಟವನ್ನು ನೀಡುವ ಪ್ರಯತ್ನ ನನ್ನದಾಗಿದೆ. ಶುಕ್ರವಾರ ಸಂಜೆ "ಓ ನನ್ನ ಚೇತನ. . ." ಎಂಬ ಸುಮಧುರ ಸಂಗೀತ ನಮ್ಮನ್ನು ಸಭಾಂಗಣದೊಳಗೆಳೆಯಿತು. ಹೊರಗೆ ಕುವೆಂಪುರವರು ಆರಾಧಿಸಿದ ಮಲೆನಾಡಿನ ನೆನಪನ್ನೇ ತಂದ ಆಹ್ಲಾದಕರ ವಾತಾವರಣವಿತ್ತು. ಹೊತ್ತು ಹೊತ್ತಿಗೆ ಊಟ, ತಿಂಡಿ, ಕಾಫಿ, ಟೀ ಮತ್ತು ಇವುಗಳ ರುಚಿ ನಮ್ಮ ಹಸಿವನ್ನು ಇನ್ನೂ ಹೆಚ್ಚಿಸುತ್ತಿದ್ದಂತೆ ಕಂಡಿತು. ಜೊತೆಗೆ ಮೆಣಸಿನಕಾಯಿ ಬೋಂಡಾ (ಮಿರ್ಚಿಬಜಿ) ಅಂತೂ ನನ್ನ ನಾಚಿಕೆಯನ್ನು ಬದಿಗಿಟ್ಟು ಮತ್ತೆ ಮತ್ತೆ ಹುಡುಕಿಕೊಂಡು ಹೋಗುವಂತೆ ಮಾಡಿದ್ದೂ ಅಲ್ಲದೆ, ಆ ಬೋಂಡಾ ಒಳಗಿನ ಮಸಾಲೆ ಹೆಣ್ಣು ಮಕ್ಕಳ ಸೀರೆ, ಡ್ರೆಸ್, ಗಂಡಸರ ಶರ್ಟುಗಳ ಮೇಲೆ ಚಿತ್ತಾರವನ್ನು ಮೂಡಿಸಿದ್ದು ಮರೆಯಲಾಗದ ನೆನಪಾಯಿತು. ಕುವೆಂಪುರವರ ಸಾಕ್ಷ್ಯಚಿತ್ರದ ಮಲೆನಾಡಿನ ಸುಂದರತಾಣಗಳು, ವಿಚಾರ ಸಂಕಿರಣದಲ್ಲಿ ಮಂಡಿಸಿದ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಮತ್ತು ಇತರ ಪ್ರಬಂಧಗಳು, ನಾಟಕಗಳು ಆಸಕ್ತರಿಗೆ ಸಿಡಿ ಮತ್ತು ಪುಸ್ತಕಗಳನ್ನು ಖರೀದಿಸುವಂತೆ ಮಾಡಿದವು. ರವಿ ಮುರೂರ್ ಸಂಗಡಿಗರ ಸುಗಮ ಸಂಗೀತ, ಉದಯ ಕುಮಾರ್ ಶೆಟ್ಟಿ ತಂಡದವರ ನೃತ್ಯರೂಪಕವಂತೂ ಮನಸೂರೆಗೊಂಡಿತು. ಅದರಲ್ಲೂ 'ಆನಂದಮಯ' ಹಾಗೂ 'ಅಂತರತಮ' ಈ ಎರಡೂ ನೃತ್ಯಗಳ ಲಯ ಮನದಾಳದಲ್ಲಿ ಉಳಿದುಬಿಟ್ಟಿತು. ರತ್ನಮಾಲ ಪ್ರಕಾಶ್ ಮತ್ತು ಎಸ್.ಎಸ್. ಪ್ರಸಾದ್ ಅವರು ತುಂಬಾ ಕಡಿಮೆ ಸಮಯದಲ್ಲಿ ಸಂಗೀತದ ಗಂಧವನ್ನೇ ಅರಿಯದ ಕೆಲವರನ್ನು ಸಂಗೀತಗಾರರನ್ನಾಗಿಸಿ ಬೆನ್ನು ತಟ್ಟಿಕೊಳ್ಳುವಂತೆ ಮಾಡಿದ್ದರು. ಈಗ ಅವರೆಲ್ಲರಿಗೂ ಸಂಗೀತ ಕಲಿಯುವ ಹಂಬಲ. ಶ್ರೀಮತಿ ಜಲಜಾರವರು ಪ್ರಸ್ತುತಪಡಿಸಿದ 'ಶ್ರೀ ರಾಮಾಯಣ ದರ್ಶನಂ'ನ ಗಮಕದ ಜೊತೆಗೆ ಬಿಳಿಮಲೆಯವರ ಅರ್ಥಪೂರ್ಣವಾದ ವ್ಯಾಖ್ಯಾನ ನಮಗೆ 'ಸೀತೆಯು ಆ ಹೊಗೆಯೊಳಗೆ ಮುಳುಗಿ ಕಪ್ಪಾದ ಅಪರೂಪ ಮುಖದ' ದರ್ಶನ ಮಾಡಿಸಿತು.

ಒಟ್ಟಾರೆ ಮೂರು ದಿನಗಳು ವಧುವರರಿಲ್ಲದ ಮದುವೆ ಮನೆಯ ಸಂಭ್ರಮದಂತಿದ್ದು ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ದಿತ್ತು. ಆದರೆ ಸೋಮವಾರ ಬೆಳಗ್ಗೆ ನಮಗೆ ಮತ್ತದೇ ಬೇಸರ ಎಂಬ ಹಾಡನ್ನು ಗುನುಗುಟ್ಟುವಂತೆ ಮಾಡಿತು.

**ಜಮುನಾ ಸಿ.ಮಠದ, ನವದೆಹಲಿ**

ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಲಾದ ಕುವೆಂಪು ಸಮಗ್ರ ನೋಟ ಕಾರ್ಯಕ್ರಮವನ್ನು ಪ್ರತ್ಯಕ್ಷವಾಗಿ ವೀಕ್ಷಿಸಿದವರಿಗೆ ಹಬ್ಬದ ನೋಟ. ಆದರೆ ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮಕ್ಕೆ ಬರಲಾಗದಿದ್ದ ನನ್ನಂತಹವರಿಗೆ ಅಭಿಮತದಲ್ಲಿ ನೀವು ತಂದಿರುವ ಕಾರ್ಯಕ್ರಮದ ವರದಿ ಎಷ್ಟು ಸಮಗ್ರವಾಗಿದೆಯೆಂದರೆ ಸಂಜಯನು ದಿವ್ಯ ದೃಷ್ಟಿಯಿಂದ ಧೃತರಾಷ್ಟ್ರನಿಗೆ ಮಹಾಭಾರತದ ಯುದ್ಧ ರಾಜಭವನದಲ್ಲೇ ಕುಳಿತು ತಿಳಿಸಿದಂತೆ ಅನುಭವವಾಯ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ನಾಡಿನ ಹೆಸರಾಂತ ವಿದ್ವಾಂಸರ ನುಡಿಗಳು ಕುವೆಂಪು ವಿಚಾರ ಧಾರೆಯನ್ನು ಮನದಾಳಕ್ಕೆ ಮುಟ್ಟಿಸಿದವು. ಕುವೆಂಪು ಅವರೊಡನೆ ನೇರ ಸಂಪರ್ಕ ಹೊಂದಿದ್ದ ಹಿರಿಯ ಕವಿಗಳು ಒಂದೇ ವೇದಿಕೆಯಲ್ಲಿ ಉಪಸ್ಥಿತರಿದ್ದದ್ದು ನಿಜಕ್ಕೂ ಅನಿರ್ವಚನೀಯ ಅನುಭವವೇ ಸರಿ. ಇಂತಹ ಶ್ಲಾಘನೀಯ ಕಾರ್ಯಕ್ರಮವನ್ನು ಆಯೋಜಿಸಿದ ಸಂಘಕ್ಕೆ ಅಭಿನಂದನೆ. ಕುವೆಂಪು ಸಮಗ್ರ ನೋಟವನ್ನು ಸಚಿತ್ರ ಸಮಗ್ರ ವರದಿಯೊಡನೆ ನೀಡಿದ ಉಷಾ ಭರತಾದ್ರಿ ಹಾಗೂ ರೇಣುಕಾ ನಿಡಗುಂದಿ ಅವರು ಪ್ರಶಂಸಾರ್ಹರು.

**ವೆಂಕಟೇಶ್ ಎಂ.ವಿ. ನವದೆಹಲಿ**

ದೆಹಲಿ ಕರ್ನಾಟಕ ಸಂಘದಲ್ಲಿ ಏಪ್ರಿಲ್ 15,16 ಮತ್ತು 17ರಂದು ನಡೆದ ಈ ಮೂರು ದಿನದ ವಿಚಾರ ಸಂಕಿರಣದಲ್ಲಿ ಕುವೆಂಪು ಅವರು ಕನ್ನಡ ಸಾಹಿತ್ಯವನ್ನು ಹೇಗೆ ವಿಶ್ವ ಸಾಹಿತ್ಯದ ಮಟ್ಟಕ್ಕೆ ಕೊಂಡೊಯ್ದರು ಎನ್ನುವುದನ್ನು 'ಕುವೆಂಪು ಸಮಗ್ರ ನೋಟ'ದಲ್ಲಿ ನೋಡಲಾಯಿತು. ಕುವೆಂಪು ಅವರದ್ದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಒಂದೇ ಮಾತಿನಲ್ಲಿ ಹೇಳಬೇಕಾದರೆ ಕುವೆಂಪು ಅವರು ಕೇವಲ ಒಬ್ಬ ಕನ್ನಡ ಸಾಹಿತ್ಯದ ಶ್ರೇಷ್ಠ ಕವಿ, ಕಥೆಗಾರ, ಕಾದಂಬರಿಕಾರ, ನಾಟಕಕಾರ ಹಾಗೂ ದಾರ್ಶನಿಕನಾಗದೆ ಅಖಂಡ ಕರ್ನಾಟಕ ಕನ್ನಡ ತಾಯಿಯ ತೇರಿನ ಸಾರಥಿಯಾಗಿ, ಬೌದ್ಧಿಕ, ವೈಚಾರಿಕ ಹಾಗೂ ವೈಜ್ಞಾನಿಕ ಯುಗದ, ಜಗದ ಶಕ್ತಿಯಾಗಿ ಮೂಡಿ ಬಂದ ಮಹಾನ್ ಚೇತನ.

ಉದ್ಘಾಟನಾ ಸಮಾರಂಭದಿಂದ ಹಿಡಿದು ಸಮಾರೋಪ ಸಮಾರಂಭದ ತನಕ ಕುವೆಂಪು ಅವರ ಬದುಕು, ಬರಹ, ಕಾವ್ಯ, ಕಾದಂಬರಿ, ನಾಟಕಗಳ ಬಗ್ಗೆ ವಿಚಾರ ಗೋಷ್ಠಿಗಳು, ಗೀತಗಾಯನ, ಭಾವಚಿತ್ರ, ನೃತ್ಯರೂಪಕ, ಕಲಾಕೃತಿ ಚಿತ್ರ ಪ್ರದರ್ಶನ, ಸಂವಾದ, ಗಮಕ, ಸುಗಮ ಸಂಗೀತ ಇತ್ಯಾದಿ ಕಾರ್ಯಕ್ರಮಗಳನ್ನು ಬಹಳ ಸುಂದರವಾಗಿ, ಸೊಗಸಾಗಿ, ವಿವರವಾಗಿ ಓದುಗರ ಮನಮುಟ್ಟುವಂತೆ, ತಟ್ಟುವಂತೆ, ಬಡಿದೆಬ್ಬಿಸುವಂತೆ, ದಾಖಲೆಯ ರೂಪದಲ್ಲಿ ಬರೆದ ಉಷಾ ಭರತಾದ್ರಿ ಹಾಗೂ ರೇಣುಕಾ ನಿಡಗುಂದಿ ಅವರು ಅಭಿನಂದನಾರ್ಹರು.

**ಸೋಮನಾಥ ಎಸ್. ಬಿರಾದಾರ, ನವದೆಹಲಿ**

ನಾನು 1991-2000 ವರೆಗೆ ದೆಹಲಿಯ ಐ.ಐ.ಟಿ.ಯಲ್ಲಿ ಪ್ರಾಧ್ಯಾಪಕನಾಗಿದ್ದೆ. ಈಗ ಬೆಂಗಳೂರಿನಲ್ಲಿದ್ದರೂ ದೆಹಲಿ ಕರ್ನಾಟಕ ಸಂಘದ ಸದಸ್ಯನಾಗಿದ್ದೇನೆ. ಇಂದಿಗೂ "ಅಭಿಮತ" ನನಗೆ ತಪ್ಪದೇ ಬರುತ್ತಿದೆ. ದೆಹಲಿಯಲ್ಲಿದ್ದಾಗ ನನ್ನ ಕಾರ್ಯಬಾಹುಳ್ಯದಿಂದ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸಲು ಸಾಧ್ಯವಾಗಲಿಲ್ಲ. ಆಗ ಕೆಲವು ಬರಹಗಳನ್ನು "ಅಭಿಮತ"ದಲ್ಲಿ ಪ್ರಕಟಿಸಿದ್ದೇನೆ. "ಅಭಿಮತ" ಲವಲವಿಕೆಯನ್ನು ಕಾಪಾಡಿಕೊಂಡು ಬಂದಿದೆ; ಸಂಚಿಕೆಗಳು ಸುಂದರವಾಗಿ ಮೂಡಿಬರುತ್ತಿವೆ. ಸಂಘದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿಗಳನ್ನು ಓದಿದಾಗ ನಿಮ್ಮ ಉತ್ಸಾಹ ದೂರದ ಬೆಂಗಳೂರಿನಲ್ಲೂ ತಟ್ಟುತ್ತದೆ. ಸುಂದರ ಮುದ್ರಣದಲ್ಲಿ "ಅಭಿಮತ" ಅದ್ವಿತೀಯ ಸ್ಥಾನದಲ್ಲಿದೆ. ನಿಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಶುಭಹಾರೈಕೆಗಳು.

**ಸಿ.ಪಿ. ರವಿಕುಮಾರ್, ಬೆಂಗಳೂರು**

## ಅಪ್ಪ, ನಾನು ಮತ್ತು ಬನ್ನಿಮರ

ಅಪ್ಪ ಹೋದ ಮಾರನೆಯ ದಿನ
ಅಮ್ಮನ ಉಸಿರ ಬೀಜವನ್ನು
ಅಲ್ಲಿ ಊರಲಾಯಿತು
ಈಗಲ್ಲಿ...
ಅಪ್ಪನ ಸಮಾಧಿಯ ಮೇಲೆ
ಅಮ್ಮನ ಹಸಿರ ಸೆರಗು
ಚಾಟು ಮಾಡಿ ಚಾಮರ ಬೀಸುವುದು
ಸುಳುಳುಳು ಉದುರುವ ಹಣ್ಣು ಎಲೆಗಳು
ಗದ್ದಿಗೆಯೊಳಗಿನ ಅಪ್ಪನ ಮುಪ್ಪು
ಮತ್ತೆಗೆ ಮಾಡುವವು
ಬಿಸಿಲು ನೀರು ಕುಡಿದ ಅಮ್ಮನ
ಬಿಗಿದಪ್ಪಿರುವ ಅಪ್ಪ
ಬೇರು ತೊಟ್ಟನು ಹೀರುತ್ತ ನಿದ್ರೆಗಿಳಿದಿದ್ದಾನೆ
ಎಂದೆಂದೂ ಹೊರಬಾರದ ಅವನು
ಅವಳ ಎದೆಗೂಡಲ್ಲಿ ಬೆಚ್ಚಗೆ
ಧ್ಯಾನ ಹೋಗಿದ್ದಾನೆ
ಕಲ್ಲು ಮೈಯನು ಮುಟ್ಟಿ ಪುಲಕಗೊಳ್ಳುವ ಅವಳು
ಸುಕ್ಕುಗಟ್ಟಿದ ಗೊರಸುಮೈಯ ಗಲಗಲನೆ ಝಾಡಿಸಲು
ಗುಬ್ಬಚ್ಚಿಗಳು ರೆಕ್ಕೆ ಬಿಚ್ಚಿ ಹಾರುವವು
ತೆರೆದೆದೆಯಲ್ಲಿ ಜೇನುಗೂಡು ಕಟ್ಟಿ
ಇರುವೆಗಳು ಮೇಲೇರಿ ಇಳಿದು
ಕೋಗಿಲೆ ತೂಮು ಗುಂಗಾಣಿಗಳ ಜುಗಲ್‌ಬಂದಿಗೆ
ಬನ್ನಿ ಎಲೆಗಳಲಿ ಬಂಗಾರದಲೆ
ಒಮ್ಮೆ ವಿಶ್ರಾಂತಿಗೇಂತ ನಾನು
ಬನ್ನಿಮರದ ಕೆಳಗೆ ಅಮ್ಮನ ಬಟ್ಟೆಗಂಟಿಂದ
ಸೀರೆಯೊಂದನ್ನು ಹೊದ್ದು ಮಲಗಿದ್ದಾಗ
ನನ್ನ ಎದೆಯ ಮೇಲೆ ಅಪ್ಪ
ಮಗುವಾಗಿ ಆಡಿ, ಮತ್ತೆ ಮತ್ತೆ
ಮಲಗಿಸಿದ್ದ

❑ ಶಿವರಾಜ ಬೆಟ್ಟದೂರು–ರಾಯಚೂರು

## ದೆಹಲಿಯಲ್ಲೊಂದು ಬೇಸಗೆ ದಿನ

ದೆಹಲಿಯ ನಲವತ್ತ ಮೂರರ ಸೆಖೆಯಲ್ಲಿ
ಇವತ್ತು ಬೆಳಬೆಳಗ್ಗೆ ವಿದ್ಯುತ್ ಖೋತಾ
ಪ್ರತಿನಿತ್ಯ ಬೆಳಗ್ಗೆ ಬಂದು ಬೀಳುವ ಅಖಬಾರು
ಇಂದು ಯಾಕೋ ಅದಕ್ಕೂ ಪರದಾಟ.
ಮನೆ ಕಿಟಕಿಯಿಂದ ಹೊರಗಿಣುಕಿದರೆ
ಹಳದಿ ಹೂಬಿಟ್ಟ ಮರ ನಗುತ್ತಿದೆ.
ಇಂಥ ಕೆಟ್ಟ ಬಿಸಿಲಲ್ಲಿ ಇದಕ್ಕೇನು ಸಂಭ್ರಮವೋ
ಮೈತುಂಬಾ ಹೊದ್ದು ಹೂವಿನ ಹೊರೆ
ಗಾಳಿ ಬೀಸಿದಾಗಲೆಲ್ಲಾ ಬೀಗುತ್ತಿದೆ!
ಬೆಳಕಿನ ಖರೀದಿಗೆ ಪ್ರತಿರಾತ್ರಿ ಮಾರುಕಟ್ಟೆಗೆ ಹೋಗಿ
ಮರಳುತ್ತಾನೆ ಸೂರ್ಯ ಬೆಳಗಾಗುವವರೆಗೆ
ಒಂದು ದಿನ ಅವನೂ ವಿದ್ಯುತ್ ಖೋತಾದಂತೆ
ತಪ್ಪಿಸಿಕೊಂಡರೆ ಹೇಗೆ ಅಖಬಾರಿನಂತೆ?
ಮೈನಾ ಹಕ್ಕಿಗಳು ಟಿವಿ ಕೇಬಲ್ ಮೇಲೆ
ಠೀವಿಯಿಂದ ಕೂತು ತೂಗುತ್ತಿವೆ.
ವಿದ್ಯುತ್ ಖೋತಾ ಆಗಿಲ್ಲವೇನೋ
ಎಂಬಂತೆ ಇವರ ದಿನ ಸಾಗುತ್ತಿದೆ!
ಕೊನೆಗೂ ಠಪ್ ಎಂದು ಸದ್ದಾಗಿ ಬಾಲ್ಕನಿಯಲ್ಲಿ
ಬಂದು ಬಿತ್ತು ವೃತ್ತಪತ್ರಿಕೆ ಸುರುಳಿ
ಬಿಚ್ಚಿದರೆ ಇದ್ದ ಸರಕಾರ ಉರುಳಿ
ಇನ್ನೊಂದಕ್ಕೆ ಅಧಿಕಾರ ಇಂದು ನಾಳಿನಲ್ಲಿ
ನಿಯೋಜಿತ ಪವರ್‌ಕಟ್ ಹಿಂತಿರುಗಿದೆ ಮರಳಿ.

❑ ಸಿ.ಪಿ. ರವಿಕುಮಾರ್

## ನಾನೇನು ಮಾಡಲಿ?

ನಿರೀಕ್ಷೆ, ಕಾತರ ಇತ್ತು
ಮಿಗಿಲೆತ್ತರ, ಮುಗಿಲೆತ್ತರ
ಕಾಲದ ಉರುಳಿಗೆ ನೀನು
ತತ್ತರ, ನಾನೋ ನಿರುತ್ತರ
ನಾವಿಬ್ಬರು ಸೇರಿ
ನೀಡಲಾರದೆ ಹೋದೆವೆ ಉತ್ತರ?
ಆ ನಿಗೂಢ ಮೌನದ ಅಂಚಿನಿಂದ
ನಿನ್ನ ನೋವಿನ ಗರ್ಭದಿಂದ
ನನ್ನ ಅಸಹಾಯಕತೆಯ ಮಧ್ಯದಿಂದ
ಜೋತು ಬಿದ್ದಿದ್ದ ಬೆರಳುಗಳ
ಮಧ್ಯೆ 'ಸುಳಿ'ದಾಡುತ್ತಿದ್ದ ಗಾಳಿಯ ಪರಿಮಳದಿಂದ
ಆ ಗಾಳಿ ನನ್ನ ಚರ್ಮದ ಕಣಕಣಗಳಿಗೆ ಸೋಕಿ
ಹುಟ್ಟಿಸಿದ ರೋಮಾಂಚನದಿಂದ
ಆ ಅರೆ ಪ್ರಜ್ಞಾವಸ್ಥೆಯ ಮರ್ಮಕ್ಕೆ
ಹುಟ್ಟಿಕೊಂಡ ಶಿಶುವಿಗೆ
ನಾಮಕರಣ ಮಾಡಲಾಗದೇ ಸೋತ
ಅನೇಕಾನೇಕ ಕ್ಷಣಗಳಿಂದ...
ನನ್ನ ನಿನ್ನ ನಡುವೆ ಅಲೆಅಲೆಯಾಗಿ
ಸಂಚರಿಸಿ, ವಿಹಾರಿಸಿ, ಕೆಣಕಿ, ಕೆಡವಿ
ಬಂಧಿಸಿಟ್ಟ ಅದೇನೋ ಇತ್ತಲ್ಲ...
ಅದೇ ಏನೂ?
ನನಗಂತೂ ಗೊತ್ತಿಲ್ಲ, ನಿನಗೆ?
ಇಂದು ದಾರಿಗೆ ತೆರುವು, ಕಣ್ಣ ಮುಂದೆ, ಹಿಂದೆ,
ಅತ್ತ, ಇತ್ತ ಗೊಂದಲಗಳ ಹರವು
ನನ್ನ ಹೆಜ್ಜೆ ಎತ್ತ? ನಿನ್ನ ಹೆಜ್ಜೆ ಖಚಿತ
ಎದೆಯ ಚಿಟ್ಟೆ ಹಾರ ಬಯಸುತ್ತೇ ನಿನ್ನ ಸುತ್ತ
ಆ ಚಿಟ್ಟೆಗೋ ನೀನೇ ಉಸಿರು
ನೀನೋ ಉರಿಸಿರುವೆ ಕೊಳ್ಳಿ, ಬಿದ್ದ ಬೆಂಕಿಯಿಂದಲೋ?
ಅಲ್ಲ, ಬೆಂಕಿ ಹಾಕಲೋ?
ಚಿಟ್ಟೆಯ ಉಸಿರು ಗಟ್ಟುತ್ತಿದೆ...!
ಕನಸುಗಳು ಜರ್ಝರಿತ, ಬಯಕೆಯ ಕಾಲು ಮುರಿತ
...ಡಬ್...ಡಬ್....ಡಅಅಅಅಬ್... ಎದೆಯಲ್ಲಿ ನಿನ್ನದೆ
ಮಿಡಿತ, ಊಹುಂ... ಆದರೂ ಇನ್ನೂ ಆಗಿಲ್ಲ ನಿನ್ನ
ಪ್ರೀತಿಯ ಮೇಲೆ ಕಡಿತ, ಎದೆಯೊಳಗೆಯೇ ಹಾಗೆಯೇ
ಇದೆ ನೆನಪುಗಳ ಕಡತ...
ಈಗ ಹುಟ್ಟಿಕೊಳ್ಳುತ್ತಿದೆ ಭಯ, ಆತಂಕ
ಅನಿಸುತ್ತಿದೆ, ಅಲ್ಲೇ ಎಲ್ಲೋ ಅಥವಾ ನಿನ್ನೊಳಗೆಯೇ ನಿಂತಿದ್ದಾನೆ
ನಿನ್ನೊಳಗಿನ ನಿನ್ನನ್ನು
ಸೂರೆ ಹೊಡೆಯುವ ಹಂತಕ...!
ಅವನೆದುರು ಹೋರಾಡೋಣ ಎಂದರೆ ನಾ
ಬಲಹೀನ...
ನನ್ನ ಬಲವೂ ನೀನೇ... ಒಲವೂ ನೀನೇ
ಆಗಿರೋಳು ತಾನೇ... ನೀನೇ ಜೊತೆಗಿಲ್ಲ
ಎಂದ ಮೇಲೆ... ಇನ್ನೆಲ್ಲಿಯ ಬಲ?
ಇನ್ನೆಲ್ಲಿಯ ಒಲವು? ಇನ್ನೆಲ್ಲಿಯ ನಲಿವು?
ಈಗ ಯುದ್ಧಭೂಮಿಗೆ ಬೆನ್ನು ಹಾಕಿದ್ದೇನೆ
ಹೇಡಿಯಾಗಿ ಅಲ್ಲ, ಹೊಡಿಬಡಿಯುವ ತಾಕತ್ತಿಲ್ಲವೆಂದೂ
ಅಲ್ಲ; ಯಾರಿಗಾಗಿ, ಯಾಕಾಗಿ ಹೋರಾಡಲಿ
ಎಂಬ ವೈರಾಗ್ಯದಿಂದ
ಮತ್ತೇ... ನನ್ನನ್ನು ಯುದ್ಧ ಮಾಡಲು ಪ್ರೇರೇಪಿಸುವ
ಕೃಷ್ಣ... ನೀನು.. ನಿನಗೆಯೇ ಯುದ್ಧ ಬೇಡವಂತೆ
ನೀನೇ ಈಗ 'ಬುದ್ಧಂ ಶರಣಂ ಗಚ್ಛಾಮಿ...'
ಸ್ಮರಣೆ ಮಾಡುತ್ತಿರಲು... ನಾನೇನು ಮಾಡಲಿ...?

❑ ರಾಕೇಶ್ ಎನ್ ಎಸ್
ದೆಹಲಿ ವರದಿಗಾರ, ದಿ ಸಂಡೆ ಇಂಡಿಯನ್ ಪತ್ರಿಕೆ

# ಅಮೇರಿಕಾದಲ್ಲಿ ನಾಲ್ಕು ಉಪನ್ಯಾಸಗಳು



ಅಮೇರಿಕಾದ ಪ್ರತಿಷ್ಠಿತ 'ಸಾಗರೋತ್ತರ ಅಧ್ಯಯನ ಕೇಂದ್ರಗಳ ಒಕ್ಕೂಟ'ವು ಅಮೇರಿಕಾದ ಮೂರು ವಿಶ್ವವಿದ್ಯಾಲಯಗಳಲ್ಲಿ ನನ್ನ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಿರುವ ಬಗ್ಗೆ ನನಗೆ 2010ರ ಜನವರಿ ತಿಂಗಳಿನಲ್ಲಿಯೇ ತಿಳಿಸಿದ್ದರು. ಆ ಪತ್ರ ಬಂದಾಗ ನನ್ನ ಆರೋಗ್ಯ ಸ್ಥಿತಿ ಅಷ್ಟೇನೂ ಚೆನ್ನಾಗಿರಲಿಲ್ಲ. ಕಾರಣ ಈ ಆಹ್ವಾನವನ್ನು ಒಂದು ವರುಷ ಮುಂದೂಡಲು ಕೋರಿಕೊಂಡಿದ್ದೆ. ನನ್ನ ಕೋರಿಕೆಯನ್ನು ಮನ್ನಿಸಿ ಒಕ್ಕೂಟದ ಕಾರ್ಯಕ್ರಮ ನಿರ್ದೇಶಕಿ ಹೈಡಿ ಮಸಾರೋ 2011ರ ಮಾರ್ಚ್ ತಿಂಗಳೊಳಗೆ ಆಹ್ವಾನವನ್ನು ಸ್ವೀಕರಿಸುವಂತೆ ತಿಳಿಸಿದ್ದರು. ಈ ನಡುವೆ 'ಏಷಿಯಾ ಸಂಶೋಧಕರ ಕೇಂದ್ರ'ವು 2010-11ನೇ ಸಾಲಿನ ವಾರ್ಷಿಕ ಸಮ್ಮೇಳನವನ್ನು ಜಗತ್ತಿನ ಅತ್ಯಂತ ಸುಂದರ ದ್ವೀಪವಾದ ಹವಾಯಿಯಲ್ಲಿ ನಡೆಸಲು ನಿರ್ಧರಿಸಿ, ಅಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಬೇಬೇಕೆಂಬ ಕರೆಯೋಲೆಯನ್ನು ಕಳಿಸಿಕೊಟ್ಟಿತ್ತು. ಈ ಅವಕಾಶವನ್ನು ಕಳೆದುಕೊಳ್ಳಲು ನಾನು ಸಿದ್ಧನಿರಲಿಲ್ಲ. ಜೊತೆಗಾರ ಡಯಾಬೆಟಿಸ್‌ಗೆ ಸ್ವಲ್ಪ ಕಾಲ ಸುಮ್ಮನಿರಲು ಹೇಳಿ ಪಯಣಕ್ಕೆ ಸಿದ್ಧನಾದೆ.

ಸಾಗರೋತ್ತರ ಅಧ್ಯಯನ ಕೇಂದ್ರಗಳ ಒಕ್ಕೂಟದ ಗೆಳೆಯ, ಹಿರಿಯ ಅಧಿಕಾರಿ ಮೈಕೆಲ್ ಹಲ್ವಾಚಸ್ ನಾನು ಕೋರಿಕೊಂಡ ರೀತಿಯಲ್ಲಿಯೇ ಪ್ರಯಾಣಕ್ಕೆ ಬೇಕಾದ ಟಿಕೆಟ್‌ಗಳನ್ನು ಖರೀದಿಸಿ ಕಳುಹಿಸಿಕೊಟ್ಟಿದ್ದ. ಎಲ್ಲ ವಿಮಾನ ನಿಲ್ದಾಣದಲ್ಲಿಯೂ ನನ್ನನ್ನು ಕರೆದೊಯ್ಯಲು ಯಾರು ಬರುತ್ತಾರೆ? ನನ್ನ ವಸತಿ ವ್ಯವಸ್ಥೆ ಎಲ್ಲಿ ಮಾಡಲಾಗಿದೆ? ಎಂಬಿತ್ಯಾದಿ ವಿವರಗಳನ್ನು ಅಚ್ಚುಕಟ್ಟಾಗಿ ತಿಳಿಸಿದ್ದರಿಂದ ನಾನು ಯಾವ ಆತಂಕಕ್ಕೂ ಒಳಗಾಗಿರಲಿಲ್ಲ (ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ನಾನು ಪೇಚಾಡಿದ್ದರ ಬಗ್ಗೆ ಬರೆದು ಕನ್ನಡಿಗರಿಗೆ ನಾನು ಬೇಸರ ಉಂಟು ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿಕೊಂಡಿದ್ದೇನೆ).

ನಿಗದಿಪಡಿಸಿದ ಪ್ರಕಾರ ಮಾರ್ಚ್ 26ರಂದು ನಾನು ಅಮೆರಿಕಾದ ಕಾಂಟಿನೆಂಟಲ್ ಏರ್‌ಲೈನ್ಸ್‌ನಲ್ಲಿ ಕುಳಿತು ನ್ಯೂಯಾರ್ಕ್‌ಗೆ ಪಯಣ ಬೆಳೆಸಿದೆ. ದೆಹಲಿಯಿಂದ ಪಯಣ ಆರಂಭಿಸಿದಾಗ ರಾತ್ರಿ 11ಗಂಟೆ. ನ್ಯೂಯಾರ್ಕ್ ತಲುಪಿದಾಗ ಅಲ್ಲಿ ಬೆಳಗಿನ ಜಾವ 6ಗಂಟೆ. ಹೀಗೆ ನೋಡಿದರೆ ಒಟ್ಟು ಏಳು ಗಂಟೆಗಳ ಪಯಣ. ಆದರೆ ವಾಸ್ತವವಾಗಿ ದೆಹಲಿ ಬಿಟ್ಟು ನ್ಯೂಯಾರ್ಕ್ ತಲುಪಲು 16 ಗಂಟೆಗಳು ಬೇಕು ಈ ನಡುವೆ ಸುಮಾರು 9 ಗಂಟೆಗಳನ್ನು ಅಟ್ಲಾಂಟಿಕ್ ಸಮುದ್ರದ ಮೇಲಣ ನೀಲಾಕಾಶ ನಿರ್ದಯವಾಗಿ ನುಂಗಿ ಹಾಕಿತ್ತು.

ನ್ಯೂಯಾರ್ಕ್ ತಲುಪಿದಾಗ ಚುಮು ಚುಮು ಬೆಳಗು. ನನ್ನ ಹೆಸರು ಬರೆದು ಹಿಡಿದುಕೊಂಡಿದ್ದ ಜಾನ್ 'ಹಲೋ ಬಿಲಿ ಮಾಲ್' ಎಂದು ತನ್ನ ಪರಿಚಯ ತಿಳಿಸಿ ಗುರುತು ಪತ್ರ ತೋರಿಸಿ, ನನ್ನನ್ನೂ ಎಳೆದುಕೊಂಡು ಬ್ರಾಡ್‌ವೇಯತ್ತ ಕಾರು ತಿರುಗಿಸಿದ. ಹೀಗೆ ಜಾನ್ ನೊಡನೆ ಹರಟುತ್ತಿದ್ದಾಗ ನಾನು ತಂಗಲು ವ್ಯವಸ್ಥೆ ಮಾಡಿದ್ದ 'ಹೋಟೆಲ್ ಮರಕೇಶ್' ತಲುಪಿದ್ದೆವು. ಸುಮಾರು 10ಗಂಟೆಗೆ ಮತ್ತೆ ಬರುವೆನೆಂದು ಹೇಳಿ, ಜಾನ್ ಥಟ್ಟನೆ ಮರೆಯಾದ.

16ಗಂಟೆಯ ಪಯಣದ ಆಯಾಸವನ್ನು ಕಡಿಮೆ ಮಾಡಿಕೊಳ್ಳಲು ನೀರು ಕುಡಿಯೋಣ ಎಂದು ಯೋಚಿಸಿ ನೀರಿಗಾಗಿ ಹುಡುಕಿದರೆ ರೂಮಲ್ಲಿ ನೀರೆಲ್ಲೂ ದೊರಕಲಿಲ್ಲ. ಹೋಟೆಲಿನ ಸ್ವಾಗತ ಕಛೇರಿಯನ್ನು ವಿಚಾರಿಸಿದಾಗ, 'ಇಲ್ಲಿ ಹಾಗೆ ನೀರಿಡುವ ವ್ಯವಸ್ಥೆ ಇಲ್ಲವೆಂದೂ, ಬಾತ್‌ರೂಮಿನ ನೀರು ಕುಡಿಯಲು ಯೋಗ್ಯವಾದುದೆಂದೂ' ಆತ ತಿಳಿಸಿದ. ಆತನ ಸಲಹೆ ನನಗೆ ಸಮ್ಮತವಾಗದಿದ್ದರೂ ಬೇರೆ ಉಪಾಯವಿಲ್ಲದೆ ಬಾತ್‌ರೂಮಿನ ನೀರು ಕುಡಿಯಲು ಅಭ್ಯಾಸ ಮಾಡಿಕೊಂಡೆ. ಅಮೆರಿಕನ್ನರು ದೆಹಲಿಗೆ ಬಂದಾಗ ಅವರಿಗೂ ಹಾಗೆ ಮಾಡಬೇಕೆಂದು ಒಂದು ಕ್ಷಣ ಅಂದುಕೊಂಡರೂ ನಮ್ಮ ಬಾತ್ ರೂಮಿನ ನೀರು ಕುಡಿದರೆ ಅದರಿಂದ ಉಂಟಾಗಬಹುದಾದ ಅಪಾಯಗಳನ್ನು ಊಹಿಸಿ ಆ ಯೋಚನೆಯನ್ನು ಅಲ್ಲಿಯೇ ಕೈಬಿಟ್ಟೆ.

10ಗಂಟೆಗೆ ಸರಿಯಾಗಿ ಜಾನ್ ಮತ್ತು ರಾಕೇಶ್ ರೂಮು ತಲುಪಿದಾಗ ನಾನು ಪಯಣದಲ್ಲಿ ರಾತ್ರಿ ಮತ್ತು ಹಗಲುಗಳನ್ನು ಕಳಕೊಂಡ ಗಲಬಿಲಿಯಲ್ಲಿದ್ದೆ. ರಾಕೇಶ್ ಬೆಚ್ಚನೆಯ ಓವರ್ ಕೋಟೊಂದನ್ನು ಕೊಟ್ಟಾಗ ನನಗೂ ನಿರಾಳವೆನಿಸಿತು. ಹಾಗೂ ಹೀಗೂ ಸುಧಾರಿಸಿಕೊಂಡು ಅವರೊಡನೆ ಹೆಜ್ಜೆ ಹಾಕಿದೆ. ಬ್ರಾಡ್‌ವೇ ಸರಳ ಸುಂದರವಾಗಿ, ಮುಂಜಾವದ ಬೆಳಕಿಗೆ ತಣ್ಣಗೆ ತೆರೆದುಕೊಂಡಿತ್ತು. ಗೆಳೆಯ ರಾಕೇಶ್ ತನ್ನ ಮನೆಗೂ , ಇತರ ಅನೇಕ ಗೆಳೆಯರ ಮನೆಗೂ ಕರೆದೊಯ್ದ. ತಾನು ಕೆಲಸ ಮಾಡುತ್ತಿದ್ದ ಪ್ರಖ್ಯಾತ ಕೊಲಂಬಿಯಾ ವಿಶ್ವ ವಿದ್ಯಾಲಯವನ್ನು ಹೊರಗಿನಿಂದಲೇ ಪರಿಚಯಿಸಿದ. ನಾನು ಬೇಗ ಬೇಗ ನೋಡುವ ಕೆಲಸ ಮುಗಿಸಿ, ರೂಮಿಗೆ ಹಿಂದಿರುಗಿ ಮರುದಿನದ ಉಪನ್ಯಾಸಕ್ಕೆ ಮರು ಸಿದ್ಧತೆ ಮಾಡಿಕೊಳ್ಳಲು ಆರಂಭಿಸಿದೆ.

28.03.2011ರ ಪೂರ್ವಾಹ್ನ 11.30ಕ್ಕೆ ಕೊಲಂಬಿಯಾ ವಿಶ್ವವಿದ್ಯಾಲಯದ ಗ್ರಂಥಾಲಯದ ಪಕ್ಕದಲ್ಲಿರು 'ಏಷಿಯಾ ಅಧ್ಯಯನ ಕೇಂದ್ರ'ದಲ್ಲಿ ನನ್ನ ಉಪನ್ಯಾಸ ಏರ್ಪಾಟಾಗಿತ್ತು. 'ಮೌಖಿಕ ಚರಿತ್ರೆಯ ಮರು ನಿರೂಪಣೆ' ಎಂಬುದು ನನ್ನ ಉಪನ್ಯಾಸದ ವಿಷಯ. ಹೇರಳವಾಗಿ ಲಭ್ಯವಿರುವ ಮೌಖಿಕ ನಿರೂಪಣೆಗಳನ್ನು ಆಧರಿಸಿ ದಕ್ಷಿಣ ಭಾರತದ ಚರಿತ್ರೆಯನ್ನು ಬರೆದರೆ. ಆ ಚರಿತ್ರೆಯ ಸ್ವರೂಪ ಹೇಗಿರುತ್ತದೆ, ಅಂಥ ಚರಿತ್ರೆಯನ್ನು ಬರೆಯಲು ನಾವು ಅನುಸರಿಸಬೇಕಾದ ವಿಧಾನಗಳೇನು? ಮತ್ತು ಈ ವಿಧಾನಗಳು ಹೇಗೆ ನಮ್ಮನ್ನು ನಿರ್ವಸಾಹತೀಕರಣದ ಕಡೆಗೆ ಕೊಂಡೊಯ್ಯಬಲ್ಲವು' ಎಂಬುದನ್ನು ನಾನು ವಿಶೇಷವಾಗಿ ಕುಮಾರರಾಮನ ಸುತ್ತ ಹುಟ್ಟಿಕೊಂಡ ನಿರೂಪಣೆಗಳನ್ನು ಆಧರಿಸಿ ವಾದಿಸಿದೆ. ದಕ್ಷಿಣ ಏಷಿಯಾದ ಬಗ್ಗೆ ಕೆಲಸ ಮಾಡುತ್ತಿದ್ದ ಸುಮಾರು 90ಜನ ವಿದ್ವಾಂಸರಿದ್ದ ಆ ಸಭೆಯಲ್ಲಿ ವಿಷಯ ಮಂಡನೆಯಾದ ಆನಂತರ ಒಳ್ಳೆಯ ಚರ್ಚೆ ನಡೆಯಿತು. 2006ರ ನೋಬೆಲ್ ಪ್ರಶಸ್ತಿ ವಿಜೇತ ಒರಾನ್ ಪಮುಖ್ (ಅವರ ಕೃತಿ : ನನ್ನ ಹೆಸರು ಕೆಂಪು) ಸಭೆಯಲ್ಲಿ ಉಪಸ್ಥಿತರಿದ್ದು, ಆನಂತರ ಚರ್ಚೆಯಲ್ಲಿ ಪಾಲ್ಗೊಂಡಿದ್ದು ನನಗೆ ವಿಶೇಷ ಸಂತೋಷ ಕೊಟ್ಟಿತ್ತು. ಇಸ್ತಾಂಬುಲ್ ಮೂಲದ ಪಮುಖ್ ಅವರು ಭಾರತದ ಬಗ್ಗೆ ಒಳ್ಳೆಯ ತಿಳುವಳಿಕೆ ಹೊಂದಿರುವ ವಿದ್ವಾಂಸರಾಗಿದ್ದರು. ಉಪನ್ಯಾಸದ ಆನಂತರ ನಡೆದ ಔತಣ ಕೂಟದಲ್ಲಿ ಅನೇಕ ವಿದ್ವಾಂಸರ ಪರಿಚಯವಾಗಿತ್ತು.

ಆ ದಿನದ ಅಪರಾಹ್ನದ ಸಮಯವನ್ನು ಕೊಲಂಬಿಯಾ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕಳೆದೆ. ಮರುದಿನ ಅಂದರೆ 29.03.2011ರ ಉಪನ್ಯಾಸವನ್ನು ನ್ಯೂಯಾರ್ಕ್ ವಿಶ್ವವಿದ್ಯಾಲಯದ 'ಪೂರ್ವ ಮತ್ತು ಮಧ್ಯ ಪ್ರಾಚ್ಯ ದೇಶಗಳ ಅಧ್ಯಯನ ವಿಭಾಗ'ದಲ್ಲಿ ಏರ್ಪಡಿಸಲಾಗಿತ್ತು. ಕೊಲಂಬಿಯಾದಲ್ಲಿದ್ದಂತೆ ಇಲ್ಲಿ ಭಾರತವನ್ನು ಚೆನ್ನಾಗಿ ತಿಳಿದಿದ್ದವರ ಸಂಖ್ಯೆ ಹೆಚ್ಚಿರಲಿಲ್ಲ. ಅಲ್ಲಿನ ಕಾರ್ಯಕ್ರಮದ ಸಂಯೋಜಕಿ ಡಾ. ಗೇಬ್ರಿಯಲಾ ಅವರು ಭಾರತದ ಬಗ್ಗೆ ಪೀಠಿಕಾ ರೂಪದ ಮಾತುಗಳನ್ನು ಸಂಕ್ಷಿಪ್ತವಾಗಿ ಹೇಳಿದ ಆನಂತರ ನಾನು ಉಪನ್ಯಾಸ ಆರಂಭಿಸಿದೆ. 'ಭಾರತದ ಜನಪರ ಧರ್ಮ' ನನ್ನ ಉಪನ್ಯಾಸದ ವಿಷಯವಾಗಿತ್ತು. 'ಮೈಲಾರಲಿಂಗನಂಥ ದೈವವನ್ನು ಕೇಂದ್ರದಲ್ಲಿರಿಸಿ ನಾವು ನಡೆಸುವ ಚರ್ಚೆಗಳು ಭಾರತದ ಧಾರ್ಮಿಕ ವ್ಯವಸ್ಥೆಯ ಸಂಕೀರ್ಣತೆಯನ್ನು ಮತ್ತು ವೈವಿಧ್ಯವನ್ನು ಹೇಗೆ ಪ್ರತೀತಗೊಳಿಸಬಲ್ಲವು' ಎಂಬುದನ್ನು ನಾನು ವಿವರಿಸಿ ಹೇಳಲು ಪ್ರಯತ್ನಿಸಿದೆ. ನಾನು ತೋರಿಸಿದ ವಿಡಿಯೋ ತುಣುಕುಗಳು ಅಲ್ಲಿನ ವಿದ್ವಾಂಸರಿಗೆ ತುಂಬ ಇಷ್ಟವಾದಂತಿತ್ತು. ವೆಸ್ಲಿಯಸ್ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕ ಪೀಟರ್ ಗೊಟ್ಟಾಕ್‌ರು ಚರ್ಚೆಯನ್ನು ತುಂಬ ಎತ್ತರಕ್ಕೆ ಕೊಂಡೊಯ್ದರು.

ಉಪನ್ಯಾಸ ಮುಗಿಯುತ್ತಿದ್ದಂತೆ ಡಾ. ಗೇಬ್ರಿಯಲಾ ನಾನೂ ಸೇರಿದಂತೆ ಹತ್ತಾರು ಜನರನ್ನು ಭಾರತೀಯ ಹೋಟೆಲೊಂದಕ್ಕೆ ಕರೆದೊಯ್ದು ಒಳ್ಳೆಯ ಊಟ ಕೊಡಿಸಿದಳು. ಆನಂತರ ಒಂದು ನಿಮಿಷವೂ ವ್ಯರ್ಥ ಮಾಡದೆ ಸಬ್‌ವೇಯ ಮೂಲಕ ನ್ಯೂಯಾರ್ಕ್‌ನ ಪ್ರಖ್ಯಾತ 'ಮೆಟ್ರೋ ಪಾಲಿಟನ್ ಮ್ಯೂಸಿಯಂ'ಗೆ ಕರೆದೊಯ್ದಳು. ಬೃಹದಾಕಾರದ ಆ ಮ್ಯೂಸಿಯಂನಲ್ಲಿ ನನಗೆ ಫ್ರೆಂಚ್ ಕಲಾಕೃತಿಗಳನ್ನು ಮತ್ತು ಆಫ್ರೀಕಾದ ಜನಪದ ದೈವಗಳ ವಿಭಾಗವನ್ನು ಮಾತ್ರ ನೋಡಲು ಸಾಧ್ಯವಾಯಿತು. ವಾಸ್ತವತಾವಾದಿಂದ ಅತಿವಾಸ್ತವತಾವಾದದ ಕಡೆಗೆ ನಿಧಾನವಾಗಿ ಚಲಿಸಿದ ಫ್ರೆಂಚ್ ಕಲಾಕೃತಿಗಳನ್ನು ನೋಡುವುದು ಒಂದು ವಿಸ್ಮಯಕಾರೀ ಅನುಭವ.

ಮೂರನೇ ದಿನ ಅಂದರೆ 30.3.2011ರಂದು ನ್ಯೂಯಾರ್ಕ್ ಕೆಲವು ಪ್ರಮುಖ ಪ್ರದೇಶಗಳನ್ನು ನೋಡಲು ನನಗೆ ಸಾಧ್ಯವಾಯಿತು. ಅದರಲ್ಲಿ ಪ್ರಖ್ಯಾತವಾದ ಟೈಂ ಸ್ಕ್ವೇರ್, ಬ್ರೂಕ್‌ಲಿನ್ ಬ್ರಿಡ್ಜ್, ಲಿಬರ್ಟಿ ಸ್ಟ್ಯಾಚ್ಯೂ ಮತ್ತು ಒಸಾಮಾಬಿನ್ ಲಾಡೆನ್ ಕೆಡವಿದ 'ವಿಶ್ವ ವ್ಯಾಪಾರ ಕೇಂದ್ರ'ದ ಪಳಿಯುಳಿಕೆಗಳು ಬೇರೆ ಬೇರೆ ಕಾರಣಕ್ಕೆ ನನಗೆ ಮುಖ್ಯವೆಂಬಂತೆ ತೋರಿತು.

**ಹವಾಯಿಯಲ್ಲಿ ನಾಲ್ಕು ದಿನ :**

ದಿನಾಂಕ 30ರ ರಾತ್ರಿ ನಾನು ನ್ಯೂಯೋರ್ಕನಿಂದ ಹವಾಯಿಗೆ ಹೊರಟೆ. ಮತ್ತೆ ಸುಮಾರು 12 ಗಂಟೆಗಳ ಪಯಣದ ಆನಂತರ ಹೊನುಲುಲು ವಿಮಾನ ನಿಲ್ದಾಣದಲ್ಲಿ ಇಳಿದಾಗ ಇಡೀ ವಾತಾವರಣವೇ ಬದಲಾಗಿತ್ತು. ಚಳಿ ಕರಗಿ, ಹಿತವಾದ ವಾತಾವರಣ ಮೂಡಿತ್ತು. ಅಲ್ಲಿ ನನಗಾಗಿ ಕಾದು ನಿಂತಿದ್ದ ಫ್ರ್ಯಾಂಕ್ ಮತ್ತೆ 'ಬಿಳಿ ಮಾಲ್' ಎಂದು ಕೈಕುಲುಕಿ ಅಲ್ಲಿನ ಪ್ರಖ್ಯಾತ 'ಅಲ್ ಮೋನಾ' ಹೋಟೆಲಿಗೆ ಕರೆದೊಯ್ದ. ಶಾಂತಸಾಗರದ ನಡುವೆ ಪ್ರಶಾಂತವಾಗಿರುವ ಹವಾಯಿ ದ್ವೀಪದ ಹೊನುಲುಲುವನ್ನು ಭೂಲೋಕದ ಸ್ವರ್ಗ ಎಂದೇ ಕರೆಯಬಹುದು. ಅಷ್ಟು ಸುಂದರವಾದ ಜಾಗವನ್ನು ನಾನು ಮತ್ತೆಲ್ಲೂ ನೋಡಿಲ್ಲ.

ಏಷಿಯಾದಲ್ಲಿ ಸಂಶೋಧನೆ ನಡೆಸುತ್ತಿರುವ ಸುಮಾರು 1500ಕ್ಕೂ ಹೆಚ್ಚು ವಿದ್ವಾಂಸರು ಹೊನುಲುಲುವಿನ ಪ್ರಖ್ಯಾತವಾದ 'ಹವಾಯಿ ಸೆಂಟರ್'ನಲ್ಲಿ ನಾಲ್ಕು ದಿನಗಳ ಕಾಲ ನಡೆಯಲಿರುವ ಸಮಾವೇಶಕ್ಕಾಗಿ ಒಟ್ಟು ಸೇರಿದ್ದರು. ಅದರಲ್ಲಿ ಬಹುತೇಕ ವಿದ್ವಾಂಸರು ಚೀನಾ, ಜಪಾನ್ ಮತ್ತು ಕೊರಿಯಾದ ಮೇಲೆ ಕೆಲಸ ಮಾಡುತ್ತಿರುವವರು. ದಕ್ಷಿಣ ಏಷಿಯಾದ ಮೇಲೆ ಕೆಲಸ ಮಾಡುತ್ತಿರುವವರ ಸಂಖ್ಯೆ ಬಹಳ ಕಡಿಮೆ ಇತ್ತು. ಅಯೋವಾ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಫಿಲಿಫ್ ಲುಟ್ಜೆಂಡಾರ್ಪ್ ಎಂಬವರ ಅಧ್ಯಕ್ಷತೆಯಲ್ಲಿ ನಡೆದ ಭಾರತ ಕುರಿತ ಗೋಷ್ಠಿಯುಲ್ಲಿ ನಾನು ಭಾಗವಹಿಸಬೇಕಾಗಿತ್ತು. "ಅನೇಕ ಪಠ್ಯಗಳ ಆಧಾರದಿಂದ ಒಂದು ಅಧಿಕೃತ ಪಠ್ಯವನ್ನು ಕಟ್ಟುವ ಕಲೋನಿಯಲ್ ವಿಧಾನಗಳಿಂದ ಭಿನ್ನವಾಗಿ, ಒಂದು ಪಠ್ಯವು ಹಲವು ಪಠ್ಯಗಳಾಗಿ ಭಾರತದಲ್ಲಿ ಏಕೆ ಮರುಸೃಷ್ಟಿಯಾಗುತ್ತವೆ ಮತ್ತು ಇಡೀ ಭಾರತೀಯ ಸಮಾಜವೇ ಒಂದು ಪಠ್ಯವನ್ನು ಕಾಲಕಾಲಕ್ಕೆ ಹೇಗೆ ಬರೆದುಕೊಳ್ಳುತ್ತದೆ' ಎಂದು ವಿವರಿಸಲು ನಾನು ಬಹಳ ಶ್ರಮಪಟ್ಟೆ. ಸುಮಾರು ಇಂಥದ್ದೇ ಚೌಕಟ್ಟಿನಲ್ಲಿ ಮಾತಾಡಿದ ಫಿಲಿಫ್ ಅವರು ಹನುಮಂತನ ಒಂದು ನೂರು ಚಿತ್ರಗಳನ್ನು ಪ್ರದರ್ಶಿಸಿಸಿ ಹನುಮಂತನ ವಿರಾಟ್ ಸ್ವರೂಪದ ಬಗ್ಗೆ ನಮಗೆಲ್ಲಾ ಮನಗಾಣಿಸಿದರು. ಸುಮಾರು 25 ವರ್ಷಗಳ ಹಿಂದೆ ಉಡುಪಿಯಲ್ಲಿ ನಾನು ಕಂಡಿದ್ದ ಫ್ರಾಂಕ್ ಕೊರೋಮ್ ಮತ್ತೆ ಹೊನಲುಲುವಿನಲ್ಲಿ ಕಂಡಾಗ ತುಂಬಾ ಖುಷಿಯಾಗಿತ್ತು.



ಹೀಗೆ ಏಷಿಯಾ ಸಂಶೋಧಕರ ಸಮಾವೇಶದಲ್ಲಿ ಭಾಗವಹಿಸುತ್ತಾ, ಆಗೀಗ ಅಲ್ಲಿಂದ ಹೊರಬಂದು ಹೊನುಲುಲು ಸುತ್ತುತ್ತಿದ್ದೆ. ಅದೊಂದು ಸುಂದರ ದ್ವೀಪ. ಅಲ್ಲಿ ನಾನು ನೋಡಿದ ಮುಖ್ಯ ಸ್ಥಳವೆಂದರೆ 'ಪರ್ಲ ಹಾರ್ಬರ್'. ಎರಡನೇ ಮಹಾಯುದ್ಧದಲ್ಲಿ ಜಪಾನೀಯರು ನಾಶ ಮಾಡಿದ ಈ ಬಂದರಿನಲ್ಲಿ ಭಯಾನಕ ಯುದ್ಧದ ಅನೇಕ ನೆನಪುಗಳಿವೆ. ಉಳಿದಂತೆ ಇಲ್ಲಿದ್ದ ನಾಲ್ಕು ದಿನಗಳು ನಿಜಕ್ಕೂ ನನಗೆ ಅಗತ್ಯಬೇಕಾಗಿದ್ದ ವಿಶ್ರಾಂತಿ ನೀಡಿತ್ತು.

ಹೊನುಲುಲುವಿನಿಂದ ಟೆಕ್ಸಾಸ್‌ಗೆ ನಾನು ಹೋಗಬೇಕಾಗಿತ್ತು. ಆದರೆ ಅಲ್ಲಿಗೆ ನೇರ ವಿಮಾನ ಇರಲಿಲಲ್ಲವೆಂದು ತೋರುತ್ತದೆ. ಹಾಗಾಗಿ ಹ್ಯೂಸ್ಟನ್‌ಗೆ ಬಂದು, ಅಲ್ಲಿ ನಾಲ್ಕಾರು ಗಂಟೆ ಕಳೆದು ಟೆಕ್ಸಾಸ್ ತಲುಪಿದೆ. 'ಟೆಕ್ಸಾಸ್‌ನಲ್ಲಿ ಏಷಿಯನ್ನರಿಗೆ ಮರ್ಯಾದೆ ಕೊಡುವುದಿಲ್ಲ' ಎಂದು ಯಾರೋ ಹೇಳಿದ್ದರಿಂದ ಸ್ವಲ್ಪ ಎಚ್ಚರದಿಂದಲೇ ಇದ್ದೆ. ಆದರೆ ನನ್ನ ಊಹೆಗೆ ವಿರುದ್ಧವಾಗಿ 5.4.2011ರಂದು ಟೆಕ್ಸಾಸ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ನನ್ನನ್ನು ಕರೆದೊಯ್ಯಲು ಟೆಕ್ಸಾಸ್ ವಿವಿಯ ಪ್ರಾಧ್ಯಾಪಕ ಪ್ರೊ. ರೂಪರ್ಟ್‌ಸ್ನೆಲ್ ಮತ್ತು ಅವರ ಸಹೋದ್ಯೋಗಿ ಸಾರಾ ಗ್ರೀನ್ ಸ್ವತಃ ಬಂದಿದ್ದದು. ಅವರು ನನ್ನನ್ನು ಉಳಿಸಿದ ಹೋಟೆಲ್‌ನ ಹೆಸರು 'ಡಬಲ್‌ಟ್ರೀ', ಅತ್ಯಾಧುನಿಕವಾದ ಆ ಹೋಟೆಲ್‌ನಲ್ಲಿ ಎಲ್ಲ ಸೌಕರ್ಯಗಳಿದ್ದುವು, ಕುಡಿಯುವ ನೀರಿನ ಹೊರತಾಗಿ. ಅಲ್ಲಿಯೂ ಬಾತ್‌ರೂಂ ನೀರು ಕುಡಿಯದೆ ಬೇರೆ ಹಾದಿಯಿರಲಿಲ್ಲ !

'ಯುಟಿ' ಎಂದೇ ಪ್ರಖ್ಯಾತವಾದ ಯೂನಿವರ್ಸಿಟಿ ಆಫ್ ಟೆಕ್ಸಾಸ್‌ನಲ್ಲಿ ಅತ್ಯಂತ ಪ್ರಬಲವಾದ ದಕ್ಷಿಣ ಏಷಿಯಾ ಅಧ್ಯಯನ ವಿಭಾಗವಿದೆ. ದೇವನೂರು ಮಹಾದೇವ ಅವರ ಕುಸುಮಬಾಲೆಯನ್ನು ಇಂಗ್ಲಿಷಿಗೆ ಅನುವಾದಿಸಿದ ಜುಡಿತ್ ಕ್ರಾಲ್, ತಮಿಳು ಕಾವ್ಯಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿ, ಈಗ ಆಧುನಿಕ ತಮಿಳು ಕತೆಗಳನ್ನು ಇಂಗ್ಲಿಷಿಗೆ ಅನುವಾದಿಸುತ್ತಿರುವ ಮಾರ್ತಾ ಸೆಲ್ಬೀ, ಹಿಂದಿ ಪಠ್ಯ ಪುಸ್ತಕ ಬರೆದ ರೂಪರ್ಟ್ ಸ್ನೆಲ್, ಏಷಿಯಾದ ಕಲಾಚರಿತ್ರೆಯ ಬಗ್ಗೆ ಅಧಿಕೃತವಾಗಿ ಮಾತಾಡಬಲ್ಲ ಪ್ರೊ. ಜೆನಿಸ್ ಲಿಯೋಸ್ಕಿ ಮೊದಲಾದವರು ಅಲ್ಲಿರುವುದು ನನಗೆ ಗೊತ್ತಿತ್ತು. ಹಾಗಾಗಿ ಅಲ್ಲಿನ ಉಪನ್ಯಾಸಕ್ಕೆ ನಾನು ವಿಶೇಷ ತಯಾರಿ ಮಾಡಿಕೊಂಡಿದ್ದೆ. 6.4.2011ರಂದು ಅಪರಾಹ್ನ 3 ಗಂಟೆಗೆ ನಿಗದಿಯಾದ ನನ್ನ ಉಪನ್ಯಾಸದ ವಿಷಯ "ಕನ್ನಡ ಸಾಹಿತ್ಯದಲ್ಲಿ ರಾಮಾಯಣ ಪರಂಪರೆ". ಜೈನ ರಾಮಾಯಣಗಳಿಂದ ಆರಂಭವಾದ ಕನ್ನಡ ರಾಮಾಯಣಗಳ ಪಠ್ಯ ಕೇಂದ್ರಿತ ಪರಂಪರೆಯು (ಓದುಗರನ್ನು ಗಮನಿಸಿ ಬರೆಯಲಾದ) ಮಧ್ಯಕಾಲೀನ ಕರ್ನಾಟಕದಲ್ಲಿ 'ತೊರವೆ ರಾಮಾಯಣ'ದಂತಹ ಕೃತಿಗಳ 'ಗಮಕಪರಂಪರೆ"ಗೆ (ಕೇಳುಗ ಕೇಂದ್ರಿತ ಬರೆಹಗಳು) ತಿರುಗಿಕೊಂಡು ಮುಂದೆ 18–19ನೇ ಶತಮಾನದಲ್ಲಿ ಪಾರ್ತಿಸುಬ್ಬನಂತಹ ಪ್ರತಿಭಾನ್ವಿತ ಕವಿಯ ಮೂಲಕ ಯಕ್ಷಗಾನದಂತಹ ಪ್ರದರ್ಶನ ಪರಂಪರೆಗೆ (ನೋಡುಗ ಕೇಂದ್ರಿತ) ಒಲಿದುಕೊಂಡು ಕಾಲ ಕಾಲಕ್ಕೆ ವಿಸ್ತಾರವಾಗಿ ಬೆಳೆದು ಬಂದ ಪರಿಯನ್ನು ನಾನು ಸೂಕ್ಷ್ಮವಾಗಿ ವಿವರಿಸಿದೆ. ಗಮಕದ ಒಂದು ಮಾದರಿಯನ್ನು ಕೇಳಿಸಿದೆ. ಪಂಚವಟಿ ಪ್ರಸಂಗದ ಒಂದು ಭಾಗವನ್ನು (ವಿಡಿಯೋ) ತೋರಿಸಿದೆ. ಸೇರಿದ ಸುಮಾರು 150ಜನ ವಿದ್ವಾಂಸರು ವಿಶೇಷ ಆಸಕ್ತಿಯಿಂದ ನಾನು ಹೇಳಿದ್ದನ್ನು ಕೇಳಿಸಿಕೊಂಡದ್ದು ನನಗೂ ತೃಪ್ತಿ ನೀಡಿತು. ಉಪನ್ಯಾಸದ ದಿನದ ರಾತ್ರಿ ಊಟವನ್ನು ಯುಟಿಯ ದಕ್ಷಿಣ ಏಷಿಯಾ ವಿಭಾಗದವರು ಆಯೋಜಿಸಿದ್ದರು. ರಾತ್ರಿ ಊಟ ಅನೇಕರನ್ನು ಪರಿಚಯಿಸಿತು, ಹತ್ತಿರಕ್ಕೆ ತಂದಿತು.

ಮರುದಿನ ಅಂದರೆ 8.4.2011ರಂದು ಪೂರ್ವಾಹ್ನವನ್ನು ವಿಶ್ವವಿದ್ಯಾಲಯುದ ಗ್ರಂಥಾಲಯುದಲ್ಲಿ ಕಳೆದೆ. ಈ ಗ್ರಂಥಾಲಯದಲ್ಲಿ ನನ್ನ 'ಕರಾವಳಿ ಜಾನಪದ'ವೂ ಸೇರಿದಂತೆ ಅನೇಕ ಕನ್ನಡ ಕೃತಿಗಳಿವೆ, ಶಿವರಾಮ ಕಾರಂತರ ಎಲ್ಲ ಕಾದಂಬರಿಗಳಿವೆ. ಆ ದಿನ ಅಪರಾಹ್ನ ಅಲ್ಲಿನ ಗೆಳೆಯರೊಂದಿಗೆ ಟೆಕ್ಸಾಸ್ ಸುತ್ತಿದೆ. ಸುಮಾರಾಗಿ ನಮ್ಮ ಮೈಸೂರಿನಂತಿರುವ ಟೆಕ್ಸಾಸ್ ನನಗೆ ತುಂಬಾ ಹಿಡಿಸಿತು. ಇಲ್ಲಿನ ಜನ ವಿದ್ವತ್ ಪ್ರಿಯರು ಮತ್ತು ಸ್ನೇಹಶೀಲರು.

ಪೂರ್ವಯೋಜನೆಯಂತೆ, 9.4.2011ರಂದು ಟೆಕ್ಸಾಸ್ ಬಿಟ್ಟು, ನ್ಯೂಯಾರ್ಕ್ ಮೂಲಕ ಪಯಣಿಸಿ, ಮರುದಿನ ರಾತ್ರಿ ದೆಹಲಿ ತಲುಪಿದಾಗ ಆಯಾಸಗೊಂಡಿದ್ದೆ. ಆದರೆ ಈ ಶೈಕ್ಷಣಿಕ ಪ್ರವಾಸ ಆಂತರಿಕವಾಗಿ ಒಂದು ಬಗೆಯ ಸಂತೋಷವನ್ನು ಕೊಟ್ಟಿತ್ತು.

❑ ಡಾ. ಪುರುಷೋತ್ತಮ ಬಿಳಿಮಲೆ

# ಹೊರನಾಡಿನಲ್ಲಿ ಸಂಗೀತ ಸೇವೆ ನೀಡುತ್ತಿರುವ ಕನ್ನಡದ ದಂಪತಿಗಳು



ಜೀವನೋಪಾಯಕ್ಕಾಗಿ ತಾಯ್ನಾಡಾದ ಕನ್ನಡದ ನೆಲವನ್ನು ಬಿಟ್ಟು ಹೊರನಾಡಿನಲ್ಲಿ ನೆಲೆಸಿ ಜೀವನವನ್ನು ಸಾಗಿಸುತ್ತಾ ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಿ ಕನ್ನಡ ಭಾಷಾ, ಸಾಂಸ್ಕೃತಿಕ ಸೇವೆಯನ್ನು ಮಾಡುತ್ತಿರುವವರು ಅನೇಕ ಮಂದಿ. ಇಂತಹವರಲ್ಲಿ ಪ್ರಸ್ತುತ ಮುಂಬಯಿಯ ಡೊಂಬಿವಲಿಯಲ್ಲಿ ನೆಲಸಿರುವ ನಾಗಭೂಷಣ್ ದಂಪತಿಗಳನ್ನು ಹೆಸರಿಸಬಹುದು.

ಮೈಸೂರು ವಿಶ್ವವಿದ್ಯಾಲಯದ ಬಿ.ಎ., ಕರ್ನಾಟಕ ಸಂಗೀತ ಪರೀಕ್ಷಾ ಮಂಡಳಿಯ ಸೀನಿಯರ್ ಗ್ರೇಡ್‌ನಲ್ಲಿ ಪ್ರಥಮ ರ್‍ಯಾಂಕ್ ಹಾಗೂ ವಿದ್ವತ್ ಪದವಿ ಪಡೆದ ಶ್ರೀಮತಿ ಉಮಾನಾಗಭೂಷಣ್‌ರವರು, ವಿವಾಹದ ನಂತರ ಡೊಂಬಿವಲಿಯಲ್ಲಿ ನೆಲಸಿ ಮಕ್ಕಳಿಗೆ ಸಂಗೀತ ಶಿಕ್ಷಣ ಕೊಡಲಾರಂಭಿಸಿದರು. ಅವರ ಮತ್ತು ಅವರ ಪತಿಯ ನಿಸ್ವಾರ್ಥ ಸೇವೆ ಮತ್ತು ತ್ಯಾಗದ ಫಲವಾಗಿ ಇಂದು "ಮೈಸೂರು ಸಂಗೀತ ವಿದ್ಯಾಲಯ" ಮುಂಬಯಿಯ ಒಂದು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆದು ನಿಂತಿದೆ.

165ಕ್ಕೂ ಹೆಚ್ಚು ವಿದ್ಯಾರ್ಥಿವೃಂದವನ್ನು ಹೊಂದಿರುವ ಈ ಸಂಗೀತ ವಿದ್ಯಾಲಯದಲ್ಲಿ ಕರ್ನಾಟಕ ಸಂಗೀತ ಶೈಲಿಯ ಹಾಡುಗಾರಿಕೆ, ವೀಣೆ, ಪಿಟೀಲು, ಮ್ಯಾಂಡೋಲಿನ್, ಮೃದಂಗ ಮತ್ತು ದೇವರ ನಾಮವೇ ಅಲ್ಲದೆ ಹಿಂದೂಸ್ತಾನಿಯ ಶೈಲಿಯ ಹಾಡುಗಾರಿಕೆ, ಹಾರ್ಮೋನಿಯಂ, ತಬಲ, ಅಭಂಗ ಮತ್ತು ಸುಗಮ ಸಂಗೀತಗಳನ್ನು ಕಲಿಸಿ ಕೊಡಲಾಗುತ್ತಿದೆ. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಸಂಗೀತ ಶಿಕ್ಷಕರಿದ್ದು ವಿದುಷಿ ಶ್ರೀಮತಿ ಉಮಾನಾಗಭೂಷಣ್ ಪ್ರಾಂಶುಪಾಲರಾಗಿದ್ದಾರೆ.

ಸಂಗೀತ ಶಿಕ್ಷಣವು ಕರ್ನಾಟಕ ಸರ್ಕಾರದ ಸಂಗೀತ ಪರೀಕ್ಷಾ ಮಂಡಳಿಯ ಪಠ್ಯಕ್ರಮದಂತೆ ನಡೆಯುತ್ತಿದೆ. ಪ್ರತಿ ವರ್ಷ ಕರ್ನಾಟಕ ಸರ್ಕಾರ ನಡೆಸುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಬೆಂಗಳೂರು, ಮೈಸೂರು ಕೇಂದ್ರಗಳಿಗೆ ಕಳುಹಿಸುತ್ತಿದ್ದು ಪ್ರತಿವರ್ಷವೂ ಶೇ 100% ಉತ್ತಮ ಉತ್ತೀರ್ಣ ಅಂಕಗಳೊಂದಿಗೆ ಫಲಿತಾಂಶವನ್ನು ವಿದ್ಯಾಲಯ ಪಡೆಯುತ್ತಿದೆ. ಪ್ರತಿ ವರ್ಷ ಶ್ರೀ ಗಣೇಶೋತ್ಸವ, ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಉತ್ಸವ, ನವರಾತ್ರಿಯಲ್ಲಿ ಶ್ರೀ ಶಾರದಪೂಜೆ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಅಂಗವಾಗಿ ಯುವ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಸಂತವಾಣಿ ಗಾಯನ ಸ್ಪರ್ಧೆ (ವಿವಿಧ ಭಾಷೆಯ ಸಂತರ ಕೃತಿಗಳ ಗಾಯನ) ಯಶಸ್ವಿಯಾಗಿ ಏರ್ಪಡಿಸುತ್ತಿದೆ. ವಿದ್ಯಾಲಯದ ವಿದ್ಯಾರ್ಥಿಗಳು ಅನೇಕ ಕಡೆ ಸಂಗೀತ ಕಾರ್ಯಕ್ರಮಗಳನ್ನು ನಡೆಸಿ ರಸಿಕರ ಮತ್ತು ವಿದ್ವಾಂಸರ ಮೆಚ್ಚುಗೆ ಪಡೆದಿದ್ದಾರೆ. ಕೇವಲ ಸಂಗೀತ ಶಿಕ್ಷಣವೊಂದೇ ಅಲ್ಲದೆ ವಿದ್ಯಾಲಯವು ಅನೇಕ ಸಂಗೀತ ಸಾಹಿತ್ಯ ಕಾರ್ಯಕ್ರಮಗಳನ್ನು ಕರ್ನಾಟಕದ ಪ್ರಮುಖ ವಿದ್ವಾಂಸರು ಮತ್ತು ಸಾಹಿತಿಗಳ ಭಾಗವಹಿಸುವಿಕೆಯೊಂದಿಗೆ ಯಶಸ್ವಿಯಾಗಿ ಏರ್ಪಡಿಸಿದೆ.

ಸಂಗೀತ ಶಾಲೆಗಳನ್ನು ನಡೆಸುವುದೇ ಕಷ್ಟ. ಅದರಲ್ಲೂ ಹೊರನಾಡಾದ ಮುಂಬಯಿಯಲ್ಲಿ ಕನ್ನಡದ ಮಕ್ಕಳನ್ನೂ, ಸ್ಥಳೀಯ ಮಹಾರಾಷ್ಟ್ರೀಯರನ್ನು ಒಲಿಸಿಕೊಂಡು ಕರ್ನಾಟಕ ಮತ್ತು ಹಿಂದೂಸ್ಥಾನೀ ಶಾಸ್ತ್ರೀಯಸಂಗೀತ ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ಕಳೆದ 28 ವರುಷಗಳಿಂದ ಕನ್ನಡ ಮಹಿಳೆಯೊಬ್ಬಳು ನಡೆಸುತ್ತಿರುವುದೆಂದರೆ ಅದು ಒಂದು ಉನ್ನತ ಸಾಧನೆಯೇ ಸರಿ.



ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಮುಂಬೈನಲ್ಲಿ ನೆಲೆಸಿದ್ದು ಹಲವಾರು ಸಂಘ ಸಂಸ್ಥೆಗಳಲ್ಲಿ ನಿರಂತರವಾಗಿ ಸಂಗೀತ ಅಭಿವೃದ್ಧಿಯ ಕಾರ್ಯ ನಿರ್ವಹಿಸುತ್ತಿರುವ ಬಿ. ನಾಗಭೂಷಣ್ ಅವರ ಸೇವೆಯನ್ನು ಗುರುತಿಸಿ ಬೆಂಗಳೂರಿನ ಶ್ರೀ ತ್ಯಾಗರಾಜ ಗಾನ ಸಭಾ ಟ್ರಸ್ಟ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದ ಸಂಯುಕ್ತ ಆಶ್ರಯದಲ್ಲಿ 8.5.2011ರಂದು ಆಚರಿಸಲಾದ 40ನೇ ವರ್ಷದ ಭಗವದ್ ಶ್ರೀ ಶಂಕರ ಜಯಂತಿ ಸಂಗೀತೋತ್ಸವದಂದು "**ಸಂಘಟನಾ ಕಲಾಭೂಷಣ**" ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು. ಹೊರನಾಡ ಕನ್ನಡಿಗ ಬಿ. ನಾಗಭೂಷಣ್ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಸಂಘಕ್ಕೆ ಭೇಟಿ ನೀಡಿದ ಕರ್ನಾಟಕದ ವಿದ್ವಾಂಸರು



ಚಿತ್ರದಲ್ಲಿ ಎಡದಿಂದ ಬಲಕ್ಕೆ : ಪ್ರೊ. ಟಿ.ಎಸ್. ಸತ್ಯನಾಥ (ದೆಹಲಿ ವಿ.ವಿ), ಪ್ರೊ. ಶ್ರೀಕೃಷ್ಣ ಭಟ್ ( ಕಲ್ಲಿಕೋಟೆ ವಿ.ವಿ.), ಪ್ರೊ. ವಿ.ಜಿ. ಪೂಜಾರ್ (ಗುಲ್ಬರ್ಗಾ ವಿ.ವಿ.), ಪ್ರೊ. ಸಿ.ಪಿ. ಸಿದ್ದಾಶ್ರಮ (ಮೈಸೂರು ವಿ.ವಿ.), ಹಿಂಬದಿಯ ಸಾಲಿನಲ್ಲಿ : ಡಾ. ರಾಜಗೋಪಾಲ್ (ದೆಹಲಿ ವಿ.ವಿ.) ಪ್ರೊ. ಎ.ವಿ. ನಾವಡ (ಕನ್ನಡ ವಿ.ವಿ.), ಪ್ರೊ. ಎಸ್.ಪಿ. ಪಾಟೀಲ್ (ಕನ್ನಡ ವಿ.ವಿ.), ಡಾ. ಕೆ. ಗೋಕುಲನಾಥ್ (ಬೆಂಗಳೂರು ವಿ.ವಿ.) ಡಾ. ಬಸವರಾಜ ಕಲ್ಗುಡಿ (ಬೆಂಗಳೂರು ವಿ.ವಿ.) ಹಾಗೂ ಡಾ. ಪುರುಷೋತ್ತಮ ಬಿಳಿಮಲೆ, ಸಂಘದ ಮಾಜಿ ಅಧ್ಯಕ್ಷರು

ಅಭಿನಂದನೆ

# ಕನ್ನಡಕ್ಕೆ ಹಿರಿಮೆ ತಂದ ನಾಲ್ಕು ರಾಷ್ಟ್ರೀಯ ಚಲನಚಿತ್ರ ಪುರಸ್ಕಾರ


ಎನ್.ಮನು ಚಕ್ರವರ್ತಿ
ಅತ್ಯುತ್ತಮ ಚಿತ್ರವಿಮರ್ಶಕ

58ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಕನ್ನಡ ಚಿತ್ರ ರಂಗವು ನಾಲ್ಕು ಪ್ರಶಸ್ತಿಗಳನ್ನು ಗಳಿಸುವುದರ ಮೂಲಕ ಗಣನೀಯ ಸಾಧನೆ ಪ್ರದರ್ಶಿಸಿದೆ. 'ಬೆಟ್ಟದ ಜೀವ', 'ಹೆಜ್ಜೆಗಳು' ಮತ್ತು 'ಪುಟ್ಟಕ್ಕನ ಹೈವೇ' ಚಿತ್ರಗಳು 2010ನೇ ಸಾಲಿನ ಪ್ರಶಸ್ತಿಯನ್ನು ಗಳಿಸಿವೆ. ಅತ್ಯುತ್ತಮ ಚಿತ್ರವಿಮರ್ಶೆ ಪ್ರಶಸ್ತಿಯನ್ನು ಕನ್ನಡದ ಎನ್. ಮನುಚಕ್ರವರ್ತಿ ಪಡೆದಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿನ ವಿಮರ್ಶೆಗಾಗಿ ಅವರಿಗೆ ಈ ಪ್ರಶಸ್ತಿ ಲಭಿಸಿದೆ.


ಪಿ.ಶೇಷಾದ್ರಿ
ಅತ್ಯುತ್ತಮ ಚಿತ್ರ ಮತ್ತು ಪರಿಸರ ವಿಭಾಗ

**'ಬೆಟ್ಟದ ಜೀವ'** – ಜ್ಞಾನಪೀಠ ಪುರಸ್ಕೃತ ಶಿವರಾಮ ಕಾರಂತರ ಕಾದಂಬರಿ ಆಧಾರಿತ 'ಬೆಟ್ಟದ ಜೀವ' ಪರಿಸರ ವಿಭಾಗ ಮತ್ತು ಅತ್ಯುತ್ತಮ ಕಥಾ ಚಿತ್ರ ಪ್ರಶಸ್ತಿ ಪಡೆದಿದೆ. ಬಸಂತಕುಮಾರ್ ಪಾಟೀಲ್ ನಿರ್ಮಿಸಿರುವ ಈ ಚಿತ್ರದ ನಿರ್ದೇಶಕ ಪಿ.ಶೇಷಾದ್ರಿ ಅವರು ಹೊಸ ದಾಖಲೆಯನ್ನು ಸೃಷ್ಟಿಸಿದ್ದಾರೆ. ನಿರ್ದೇಶಿಸಿದ ಆರು ಚಿತ್ರಗಳೂ ಸತತವಾಗಿ ರಾಷ್ಟ್ರೀಯ ಪುರಸ್ಕಾರ ಪಡೆದ ಮೊಟ್ಟ ಮೊದಲ ನಿರ್ದೇಶಕನೆಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಮುನ್ನುಡಿ (2001), ಅತಿಥಿ (2002), ಬೇರು (2004), ತುತ್ತೂರಿ (2007) ಮತ್ತು ವಿಮುಕ್ತಿ (2008). ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಬಂಧವನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಿರುವ ಶೇಷಾದ್ರಿ ಅವರ ಸಾಧನೆ ಕನ್ನಡ ಚಿತ್ರರಂಗದ ಹೊಸ ಮೈಲಿಗಲ್ಲು.


ಪಿ.ಆರ್. ರಾಮದಾಸ್
ಅತ್ಯುತ್ತಮ ಮಕ್ಕಳ ವಿಭಾಗ

**ಹೆಜ್ಜೆಗಳು**– ಬಸಂತ ಕುಮಾರ್ ಪಾಟೀಲ್ ನಿರ್ಮಿಸಿರುವ 'ಹೆಜ್ಜೆಗಳು' ಚಿತ್ರ ಅತ್ಯುತ್ತಮ ಮಕ್ಕಳ ವಿಭಾಗದ ಸ್ವರ್ಣಕಮಲ ಪ್ರಶಸ್ತಿಯನ್ನು ಗಳಿಸಿದೆ. ಪಿ.ಆರ್.ರಾಮದಾಸ ನಾಯ್ಡು ನಿರ್ದೇಶನದ ಈ ಚಿತ್ರ ಶಾಲೆಗೆ ಹೋಗಲು ಹೋರಾಟ ನಡೆಸುವ ಬಡ ಬಾಲಕಿಯ ಕಥಾ ವಸ್ತುವುಳ್ಳದ್ದಾಗಿದೆ. ಮಕ್ಕಳ ವಿಭಾಗದ ಹ್ಯಾಟ್ರಿಕ್ ಪ್ರಶಸ್ತಿಯು 'ಹೆಜ್ಜೆಗಳು' ಚಿತ್ರಕ್ಕೆ ಪ್ರಾಪ್ತವಾಗಿದೆ. ಅಭಯ ಸಿಂಹರ "ಗುಬ್ಬಚ್ಚಿಗಳು" (2008) ಹಾಗೂ ಪಿ.ಎನ್.ರಾಮಚಂದ್ರ ಅವರ 'ಪುಟಾಣಿ ಪಾರ್ಟಿ' (2009) ಪ್ರಶಸ್ತಿ ಪಡೆದದ್ದನ್ನು ಇಲ್ಲ ಸ್ಮರಿಸಬಹುದಾಗಿದೆ. ಅಭಯಸಿಂಹರ 'ಗುಬ್ಬಚ್ಚಿಗಳು' ಚಿತ್ರದಲ್ಲ ನಟಿಸಿದ್ದ ಬಾಲಕಿ ಪ್ರಕೃತಿ 'ಹೆಜ್ಜೆಗಳು' ಚಿತ್ರದ ಅಭಿನಯದಿಂದ ಎಲ್ಲರ ಗಮನ ಸೆಳೆದಿದ್ದಾಳೆ.


ಬಿ. ಸುರೇಶ್
ಅತ್ಯುತ್ತಮ ಕನ್ನಡ ಕಥಾ ಚಿತ್ರ

**ಪುಟ್ಟಕ್ಕನ ಹೈವೇ** – ಬಿ.ಸುರೇಶ್ ನಿರ್ದೇಶನದ 'ಪುಟ್ಟಕ್ಕನ ಹೈವೇ' ಅತ್ಯುತ್ತಮ ಕನ್ನಡ ಕಥಾ ಚಿತ್ರ ವಿಭಾಗದ ಪ್ರಶಸ್ತಿಗೆ ಭಾಜನವಾಗಿದೆ. ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರ ಕಾದಂಬರಿ ಆಧಾರಿತ "ಪುಟ್ಟಕ್ಕನ ಹೈವೇ" ಸಮಾಜದಲ್ಲಿ ತಾಂಡವವಾಡುತ್ತಿರುವ ಹಲವಾರು ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದೆ. ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ನಟಿ ಶೃತಿ ಹಾಗೂ ನಟ ಪ್ರಕಾಶ್ ರೈ ಅವರು ತಮ್ಮ ಮನೋಜ್ಞ ಅಭಿನಯದಿಂದ ಚಿತ್ರಕ್ಕೆ ಜೀವ ತುಂಬಿ ಚಿತ್ರರಸಿಕರ ಅಪಾರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

*ಕನ್ನಡದ ಖ್ಯಾತಿಯನ್ನು ಎತ್ತಿ ಹಿಡಿದ ಪ್ರಶಸ್ತಿ ವಿಜೇತರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.*

# ಹತ್ತನೇ ತರಗತಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಕನ್ನಡದ ಕುವರಿಯರು


ಕಂಪನಾ ಬಿಟ್ಟಳ್ಳಿ

ದೆಹಲಿಯ ಆನಂದ್‌ನಿಕೇತನದ ಮೌಂಟ್ ಕಾರ್ಮೆಲ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕು. ಕಂಪನಾ ಬಿಟ್ಟಳ್ಳಿ 95% ಅಂಕ ಗಳಿಸಿ ಶಾಲೆಯ ಪ್ರಥಮ ಸ್ಥಾನ ಪಡೆದಿದ್ದಾಳೆ. ಎಲ್ಲ ವಿಷಯಗಳಲ್ಲೂ ಅತ್ಯಧಿಕ ಅಂಕ ಗಳಿಸಿರುವ ಕಂಪನಾ ಈಗಾಗಲೇ ಫ್ರೆಂಚ್ ಭಾಷೆಯಲ್ಲಿ ಗ್ರ್ಯಾಜುಯೇಶನ್ ಅರ್ಹತೆ ಪಡೆದಿದ್ದಾಳೆ. ಕೇವಲ ವ್ಯಾಸಂಗದಲ್ಲಷ್ಟೇ ಅಲ್ಲದೇ ಶಾಲೆಯ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳಲ್ಲೂ ಮುಂದಿರುವ ಕಂಪನಾ ಭರತನಾಟ್ಯ ರಂಗ ಪ್ರವೇಶವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಕಳೆದ ವರ್ಷ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಮುಂದಿನ ವ್ಯಾಸಂಗಕ್ಕಾಗಿ ಕರ್ನಾಟಕಕ್ಕೆ ತೆರಳಲಿರುವ ಕಂಪನಾ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ, ಮಾಜಿ ಪ್ರಧಾನಿ ದೇವೇಗೌಡರ ಆಪ್ತ ಸಹಾಯಕ ಬಿ.ಆರ್. ಚಂದ್ರಶೇಖರ್ ಹಾಗೂ ಶಶಿಕುಮಾರಿ ಅವರ ಪುತ್ರಿ.


ಶ್ರೇಯ ದೇಸಾಯಿ

ದೆಹಲಿಯ ಹೌಸ್‌ಖಾಸ್‌ನ ಸೇಂಟ್ ಪಾಲ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕು. ಶ್ರೇಯ ದೇಸಾಯಿ ಗಣಿತದಲ್ಲಿ 100 ಅಂಕ ಗಳಿಸುವುದರೊಡನೆ ಒಟ್ಟಾರೆ 92% ಅಂಕ ಗಳಿಸಿದ್ದಾಳೆ. ಬೀದಿ ನಾಟಕ, ಚರ್ಚಾ ಸ್ಪರ್ಧೆ, ನೃತ್ಯ, ಕವಿತೆ ರಚನೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಪಾಲ್ಗೊಂಡು ಹಲವಾರು ಬಹುಮಾನಗಳನ್ನು ಪಡೆದಿದ್ದಾಳೆ. ಶ್ರೇಯ ದೇಸಾಯಿ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಎನ್.ಕೆ. ದೇಸಾಯಿ ಮತ್ತು ಸುನೀತ ದೇಸಾಯಿ ಅವರ ಪುತ್ರಿ ಹಾಗೂ ಹಿರಿಯ ಕನ್ನಡತಿ ಪ್ರೇಮ ದೇಸಾಯಿ ಅವರ ಮೊಮ್ಮಗಳು.


ಸ್ವಾತಿ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕು.ಸ್ವಾತಿ 92% ಅಂಕ ಗಳಿಸಿ ಶಾಲೆಯ ಪ್ರಥಮ ಸ್ಥಾನ ಪಡೆದಿದ್ದಾಳೆ. ಅಭಿನಯದಲ್ಲಿ ಆಸಕ್ತಿವುಳ್ಳ ಸ್ವಾತಿ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶನಗೊಂಡ ಭಗವದ್ದುಕೀಯಂ ನಾಟಕದಲ್ಲಿ ಅಭಿನಯಿಸಿ ಉತ್ತಮ ಪ್ರದರ್ಶನ ನೀಡಿದ್ದಾಳೆ. ಸ್ವಾತಿ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ, ಕರ್ನಾಟಕ ಭವನದ ಉದ್ಯೋಗಿ ಆನಂದರಾಮ್ ಮತ್ತು ವಿಜಯಶ್ರೀ ಅವರ ಪುತ್ರಿ.

*ಮುಂದಿನ ವ್ಯಾಸಂಗದಲ್ಲೂ ಉನ್ನತ ಸ್ಥಾನ ಗಳಿಸಲಿ; ಕಂಪನಾ, ಶ್ರೇಯ ಹಾಗೂ ಸ್ವಾತಿ ಅವರ ಭವಿಷ್ಯ ಉಜ್ವಲವಾಗಿ ಬೆಳಗಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.*

Delhi Karnataka Sangha's Abhimatha Monthly,
June -2011, Price Rs.1/- RNI Regn. No. 53405/91, DL-SW-15/4016/10-11-12
Printout Date : June 8th / 9th, Postal Date :10th / 11th, Total Pages-20



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,